


ಅಪರಂಜಿ

ತಿಳಿನಗೆಯ ಕಾರಂಜಿ

☐ ಆನಂದ್ ☐ ಭುವನೇಶ್ವರಿ ಹೆಗಡೆ ☐ ಕೇಫ

☐ ಅ. ರಾ. ಸೇ. ☐ ಸುಮಿತ್ರ ಅಡಿಗ

☐ ಕಿಟ್ಟು ☐ (ದೂರ) ವಾಣಿ ☐ ನಾ. ಕಸ್ತೂರಿ

☐ ಧನವಂತ ☐ ಶಿವು ☐ ಆರತಿ

ಸಂಪುಟ–೩
ಸಂಚಿಕೆ–೩
ಡಿಸೆಂಬರ್–85

ಬಿಡಿಪ್ರತಿ :
ಕೇವಲ ಒಂದೂವರೆ ರೂಪಾಯಿ

ಅಪರಂಜಿ

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ ರೂ. 15-00

ಬಿಡಿ ಪ್ರತಿ ;—ಒಂದೂವರೆ ರೂಪಾಯಿ

ಎರಡು ಮಾತು

ಅಪರಂಜಿ ತಿಳಿಹಾಸ್ಯಕೆ ಮೀಸಲಾದ ಮಾಸ ಪತ್ರಿಕೆ. ಉತ್ತಮ ಅಭಿರುಚಿಯ ಹಾಸ್ಯ ಲೇಖನಗಳು, ಚುಟುಕಗಳು, ಕವನಗಳು ಹಾಗೂ ವ್ಯಂಗ್ಯ ಚಿತ್ರಗಳು, ಇವುಗಳಿಗೆ ಅಪರಂಜಿಯಲ್ಲಿ ಸದಾ ಸ್ವಾಗತ. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಉಂಟು. ಅಗತ್ಯವಾಗಿ ನಿಮ್ಮ ಲೇಖನಗಳನ್ನು ಕಳಿಸಿ.

ಶಿವಕುಮಾರ್
ಸಂಪಾದಕ

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ
ಬೆಂಗಳೂರು-560 003.

ಈ ಸಂಚಿಕೆಯಲ್ಲಿ

ವ್ಯಂಗ್ಯ ಚಿತ್ರಗಳು   ಅಶ್ವಥ್

ಮುದ್ರಣ . ಇಂಪ್ರೆಷನ್ಸ್, ಮಲ್ಲೇಶ್ವರಂ ದೂರವಾಣಿ : 362989, 363444



(ತಿಳಿನಗೆಯ ಕಾರಂಜಿ)

ಸಂಪುಟ ೧ ಡಿಸೆಂಬರ್ ೮೫ ಸಂಚಿಕೆ ೧

ಅವರಿಗೆ "ದ" ಎಂದು ಉಪದೇಶ ಮಾಡಿ ತಿಳಿದು ಕೊಂಡಿರಾ ಎನ್ನಲು "ತಿಳಿದು ಕೊಂಡೆವು, ದಾನ ಮಾಡಿರಿ ಎಂದು ನಮಗ ಹೇಳುತ್ತಿದ್ದೀಯೆ" ಎಂದರು.

—ಬೃಹದಾರಣ್ಯಕ

ಪ್ರಜಾಪತಿಯು ಮನುಷ್ಯರಿಗೆ 'ದ' ಎಂದು ಉಪದೇಶಿಸಿದಾಗ ಮನುಷ್ಯರು ತಿಳಿದುಕೊಂಡಿದ್ದು ಈ ವಾಕ್ಯದಲ್ಲಿದೆ.

ಇಂದೇನಾದರೂ ಅವನು ಅದೇ ಉಪದೇಶ ಮಾಡಿದಾಗ ಇದೇ ಉತ್ತರ ಬಂದಿದ್ದರೆ ಪ್ರಜಾಪತಿಯು ಹೀಗೆಂದು ಹೇಳುತ್ತಿದ್ದನೆಂಬುದಕ್ಕೆ ಯಾವ ಸಾಕ್ಷ್ಯವೂ ಇಲ್ಲ: ನಿವು ಏನೂ ತಿಳಿದುಕೊಳ್ಳಲಿಲ್ಲ. ದ ಎಂದರೆ ನೀವು ದಡ್ಡರು. ನೀವು ದಾನ ಮಾಡುವುದಿಲ್ಲ ಬಡ್ಡಿಗೆ ಬಡಿದುಕೊಳ್ಳುತ್ತಿದೀರಿ. ದುರ್ಬಲರನ್ನು ಬೆಂಬಲಿಸುವ ನೆಪದಲ್ಲಿ ಅವರ ಸಂಪತ್ತನ್ನು ಬಾಚಿಕೊಳ್ಳುವುದಕ್ಕೆ ಹವಣಿಸಿದ್ದೀರಿ. ಕೊಟ್ಟಗುಂಟನ್ನು ವಾಪಸು ಮಾಡದಿರುವುದೇ ನಿಮ್ಮ ಹಕ್ಕೆಂದು ಭಾವಿಸಿದ್ದೀರಿ. ನಂಬಿದ್ದೀರಿ.

ನೀವು ದರಿದ್ರರು: ತೃಪ್ತಿಯನ್ನು ಕಳೆದುಕೊಂಡಿರುವಿರಿ, ಮತ್ಸರಕ್ಕೊಳಗಾಗಿದ್ದೀರಿ. ಅಧಿಕಾರ, ಕೀರ್ತಿಗಳ ದಾಸರಾಗಿರುವಿರಿ.

ನೀವು ದರವೇಶಿಗಳು. ಭಗವಂತನು ಕೊಟ್ಟ ಭೂಮಿಯನ್ನು ಕುಂಟು ನೆಪಗಳನ್ನೊಡ್ಡಿ ಹಾಳುಗೆಡವುತ್ತಿದ್ದೀರಿ. ಸಾಲದೆಂದು ನಿಮ್ಮ ಮನೆಯನ್ನು ಬಿಟ್ಟು ಬಿಟ್ಟು ಬಾಹ್ಯಾಕಾಶದಲ್ಲಿ ಬಡಿದಾಡಲು ಯೋಜಿಸಿದ್ದೀರಿ. ನಿಮ್ಮ ಬುದ್ಧಿಗೊಂದಿಷ್ಟು ಬೆಂಕಿ ಹಾಕಿದರು.

ನೀವು ದುರಾಶೆಗಳನ್ನು ದಮನಮಾಡಿ ದೇವತೆಗಳಾಗಿರಿ, ದಯೆಯನ್ನು (ನಿಮ್ಮ ಮೇಲೆ) ತೋರಿಸಿ ಅಸುರತ್ವವನ್ನು ಕಳೆದುಕೊಳ್ಳಿರಿ, ದಾನಮಾಡಿ ಮನುಷ್ಯರಾಗಿರಿ.

ಅಪರಂಜಿ ಕಿಡಿ

—ಆನಂದ್

ಭಾರತ—ಪಾಕಿಸ್ತಾನಗಳ ನಡುವೆ ಅಣುಶಕ್ತಿ ಒಪ್ಪಂದಕ್ಕೆ ರೇಗನ್ ಯತ್ನ

—ಸುದ್ದಿ

ನೀತಿ ಹೇಳುಕ್ಕೆ ಆತನ್ನ ಕರೆಸಿದರೆ ....

* * * * *

ಶಾಂತಿ, ಸ್ವಾತಂತ್ರ್ಯ, ಸಮಾನತೆಗಳಿಗಾಗಿ 'ವಿಶ್ವ ಸಮರ'ಕ್ಕೆ ರಾಜೀವ್ ಕರೆ.

—ಪತ್ರಿಕೆ

ಅಲ್ಲ ? ?

* * * * *

'ಭಗವಾನ್' ರಜನೀಶ್ ಅಮೆರಿಕದ ಜೈಲಿನಲ್ಲಿ

—ಸುದ್ದಿ

ಭಗವಂತ ಇಳೆಗೆ ಇಳಿದಂತಾಯಿತು !

* * * * *

ಬಿ. ಟಿ. ಎಸ್. ಬಸ್‌ಗಳ ಬಣ್ಣ ಬದಲಾಯಿಸುತ್ತಾರಂತೆ.

—ಪತ್ರಿಕೆ

ರಾಜಕೀಯ ಬಣ್ಣವೇ ಬದಲಾದ ಮೇಲೆ ಬಸ್‌ದೇನು ಮಹಾ ?

* * * *

ಗವಾಸ್ಕರ್ ಭಾರತದ ಇನ್ನಿಂಗ್ಸ್ ಆರಂಭಿಸಲು ಒಪ್ಪಿದರಂತೆ !

—ಸುದ್ದಿ

ಬಲವಂತ ಅಗ್ರಸ್ಥಾನ ! !

* * * * *

1992 ಒಲಿಂಪಿಕ್ಸ್ ಬಗ್ಗೆ ನಿರ್ಧಾರ: ಈಗ ಚೆಂಡು ಭಾರತದ ಕೋರ್ಟ್‌ನಲ್ಲಿದೆ.

—ಒಲಂಪಿಕ್ಸ್ ಸಮಿತಿ

ಸಧ್ಯ, ಬೇಗ ಬೇರೆ ದೇಶಕ್ಕೆ ಹೊಡೆದು ಬಿಡಿ !

*　　*　　*　　*　　*

ಆನೇಕಲ್ ಬಳಿ ಕಾಡಾನೆ ಹಾವಳಿ　　—ಪತ್ರಿಕೆ

ಊರ ಹೆಸರು ಬದಲಾಯಿಸಿ ನೋಡಬಹುದೇನೋ ?

ಚುಟುಕ

ಕೆಂಗಳೂರಿನಲ್ಲಿ ಒಬ್ಬ ಮಂಕನಿದ್ದನು.
ಚುಟಕಗಳನು ಬರೆದು ಬರೆದು ಎಸೆಯುತ್ತಿದ್ದನು.
ಕಡೆಯಲೊಮ್ಮೆ ಚುಟುಕಗಳದೆ
ದೊಡ್ಡದೊಂದು ರಾಶಿಯಲ್ಲಿ
ಕೆಂಗಳೂರು ಮಂಕನವನು ಮುಳುಗಿ ಹೋದನು !

—ಕಪಟಕವಿ

ಅಪಾರ್ಥ ಕೋಶ

—ಆನಂದ್

---

1. ತೈಲೋತ್ತಮೆ : ಹೇರ್ ಆಯಿಲ್ ಕಂಪೆನಿಯ ಸೌಂದರ್ಯ ಸ್ಪರ್ಧೆ ಗೆದ್ದವಳು
2. ಶಾರ್ಪನಖಿ : ಆಧುನಿಕ ಯುವತಿ.
3. ದೂರ್ವಾಶಿ : ಟಿ. ವಿ. ಸುಂದರಿ
4. "ರಂ" ಭೆ : ಇದನ್ನು ಕುಡಿದ ದೋಲೆ ಎಲ್ಲರೂ ಹೀಗೇ ಕಾಣುವುದು !
5, ಶುಚೀ ದೇವಿ : ಸಾಬೂನು ಜಾಹೀರಾತಿನ ತರುಣಿ.
6. ಗುಂಡೋದರಿ : ಪಥ್ಯವನ್ನಾಚರಿಸದವಳು.
7. ಪುಲಿಕೇಶಿ : ಹಿಪ್ಪೀ ಕನ್ಯೆ.
8. ಪ್ರನಾಳಿನಿ : ಟೆಸ್ಟ್ ಟ್ಯೂಬ್ ಬೇಬಿ,

☆

ಮಂಗ್ಳೂರ್ನಾಗೆ ಬೆವ್ರು !

(ರತ್ನನ ನೆಪ್ನಿಂದ)

—ಭುವನೇಶ್ವರಿ ಹೆಗಡೆ

ಕಾಶ್ಮೀರ್ದಾಗೆ ಐಸಿದ್ದಂಗೆ
ಮಡಿಕೇರಿಲಿ ಮಂಜಿದ್ದಂಗೆ
ಬಳ್ಳಾರೀಲಿ ಧೂಳಿದ್ದಂಗೆ
ಮಾಂಗ್ಳೂರ್ನಾಗೆ ಬೆವ್ರು

ಬಟ್ಟೇನೆಲ್ಲಾ ತೋಯಿಸ್ಬುಟ್ಟು
ತೊಯ್ಸಿದ್ ಬಟ್ಟೆ ಮೈಗಂಟಿಸ್ಬುಟ್ಟು
ಗೋಂದುಟ್ನಂಗೆ ಪೇಸ್ಟ್ ಮಾಡ್ತೈತೈ
ಉಪ್ನೀರಿನ್ ಬೇವ್ರು.

ಸಿಟಿ ಬಸ್ನಾಗೆ ತೂರ್ಕಂಡಿರ್ಲಿ
ಟಾಕಿಸ್ನಾಗೆ ಕುಂತ್ಕಂಡಿರ್ಲಿ
ತೆಪ್ಪ್ಗ್ಟಂದು ಅವರಸ್ತೈತೆ
ಕಂಪಲ್ಸರ್ರೀ ಬೆವ್ರು.

ಕಾಲೇಜೋಗೋ ಹುಡ್ಗೀರೆಲ್ಲಾ
ಶಿಸ್ತಾಗ್ಹಚ್ಚಿದ್ ಪೌಡರ್ನೆಲ್ಲಾ
ದಾರೀ ಮೇಲೇ ತೊಳೆದ್ಬುಡ್ತೈತೆ
ಮೇಕಪ್ಪ್ ವೈರೀ ಬೆವ್ರು.

ಮನೇಲ್ಬಿಂಡ್ತಿ ಮುನಿಸ್ಕಂಡಿದ್ರೆ
ದುಸ್ಸುಬುಸ್ಸು ಅನ್ಕಂಡಿದ್ರೆ
ಗುಡಾಂತನ್ನೋ ಪ್ರಾಣೀಗಂತೂ
ಕಂಡಾಬಟ್ಟೆ ಬೆವ್ರು.

ಅಫೀಸ್ನಾಗೆ ಬಾಸು ಅನ್ನೋ
ನಾಗರ್ ಹಾವು ಒಳೀಕ್ ಕರ್ದು
ಹೆಡೆ ಎತ್ತಿ ಬುಸ್ ಅಂತಂದ್ರೆ
ಅಳ್ಯಾಂಡ್ನಂಗೆ ಬೇವ್ರು.

ಫ್ಯಾನಿನ್ ಕೆಳಗೆ ಮಯ್ಯೀನ್ ಒಗ್ದು
ಇನ್ನೇನ್ ಸದ್ಯ ಅನ್ನೋಷ್ಟರಲ್ಲಿ
ಖೋತಾ ಕರಂಟೂ ಒಂಟೋಯ್ತಪ್ಪ
ಅಯ್ಯೋ ದೇವ್ರೇ ಬೆವ್ರು

9

ರಾಘಣ್ಣಿ — ಸಂಖ್ಯಾಶಾಸ್ತ್ರ

—ಕೇಫ

ಬೋರಿಸ್–ಬೆಕರ್ ಹೆಸರಿನ ಜರ್ಮನ್ ಹೈದ, ಇದೇ ವರ್ಷದ 7ನೇ ತಿಂಗಳು 7ನೇ ದಿನದಂದು, ತನ್ನ 17 ವರ್ಷ 7 ತಿಂಗಳು 7ನೇ ದಿನ ಜಗತ್ಪ್ರಸಿದ್ಧ ವಿಂಬಲ್ಡನ್ ಪುರುಷರ ಸಿಂಗಲ್ಸ್ ಟೆನ್ನಿಸ್ ಪ್ರಶಸ್ತಿ ಪಡೆದನೆಂದು ಪತ್ರಿಕೇಲಿ ಓದಿದ ಮೇಲೆ, ನಮ್ಮ ರಾಘಣ್ಣೀಗೆ ನ್ಯೂಮರಾಲಜಿ ತಿಗಣೆ ಕಚ್ಚಿ ಬಿಡ್ತು. ನಮ್ಮ ಮೈಗಳ್ಳರ ಸಂಘದಲ್ಲಿ ಈ ರಾಘಣ್ಣ—ಒಂದು ವಿಚಿತ್ರಪ್ರಾಣಿ. ಅವನಿಗೇನಾದರೂ ಬಂದು ಬಡಿದರೆ ಸಂಘದ ಪ್ರತಿಯೊಬ್ಬ ಸದಸ್ಯನಿಗೂ ಒಂದಲ್ಲಾ ಒಂದು ರೀತಿ ಏನಾದ್ರೂ ಬಂದು ಬಡಿದೇ ಬಡಿಯುತ್ತೆ, ಇದು ನಮ್ಮೆಲ್ಲರ ಅನುಭವ.

ರಾಜ ಬಾಬು ನಾನು ಕೂತಿದ್ದ ಟೇಬಲ್ ಹತ್ರ ರಾಘಣ್ಣಿ ಬಂದ, ಆ ಸಮಯದಲ್ಲಿ ರಾಜ ಬಾಬು ನಾನು — ಮುತ್ತಣ್ಣನ ಸ್ಪೆಷಲ್ ಕಾಕ್ಟನ್—ಹಿಖ್–ಇನ್ ಟೋರಿನೋ ನಮ್ಮ ನಮ್ಮ ಕ್ವಟರ್‌ನ ಹೀರ್ತಾ ಇದ್ವು.

"ಬಾಬು, ಇನ್ಮೇಲೆ ನಮ್ಮ ಮೈಗಳ್ಳರ ಸಂಘಕ್ಕೆ ಥಮ್ಸಪ್ ತರ್ರೊ್ೀ. ನೋ ಟೋರಿನೋ" ಅಂದ.

ಬಾಬು ನಮ್ಮ ಸಂಘದ ಸಿಪ್ ಕಮಿಟಿ ಛೇರ್ಮನ್ನು.

"ಯಾಕೋ ? ಥಮ್ಸಪ್ ಮಾಡಲ್‌ನ ಲವ್ ಮಾಡಾಕೆ ಶುರು ಹಚ್ಚಿದಿಯಾ ?" ಬಾಬು ಕೇಳಿದ.

ರಾಘಣ್ಣಿ — ಎಲ್ರಿಗೂ ತಿಳಿದ ಹಾಗೆ ನಮ್ಮ ಸಂಘದ ಮಜ್ನು.

ಛೇ–ಇಲ್ಲ ಕಣೋ. ಥಮ್ಸಪ್ಪಿನಲ್ಲಿ ಏಳಕ್ಷರ ಇವೆ–T-H-U-M-5U-P. ಬೋರಿಸ್ ಬೆಕರ್ ಲಕೀ ನಂಬ್ರು, ಅದೇ ನೋಡು T-O-R-I-N-O ಆರಕ್ಷರ C-U-R-R-E-N ಥರಾ — ಅನ್ಲಕೀ — ಫೇಲು"

"ಶಹಭಾಸ್–ಮಜ್ನು. ಆದ್ರೆ ಆ ಬೆಕರ್ ಹುಟ್ಟಿದ್ದು ಯಾವ ತಾರಿಖ್ ನೋಡು. 7-7-1985 ದಿನ ಅವನಿಗೆ 17 ವರ್ಷ 7 ತಿಂಗ್ಳು 7 ದಿನ ಆಗ್ಬೇಕಾದ್ರೆ

ಅವನು ಹುಟ್ಟಿದ್ದು ...... 31-12-1968 ಇರ್ಬೇಕು. ಹಾಗಿದ್ರೆ ಅವನ ನಂಬರ್ ಏನಿರಬೇಕು ನೋಡು" ಅಂದ ಬಾಬು.

"ಹ್ಯಾಗ್ನೋಡ್ಲಿ ?" ರಾಘಣ್ಣಿ ಕೇಳಿದ.

"ನಾಥ್ಮೆರಸ್ಸಿ ! ಕೂಡ್ಸಿ ನೋಡೋ"

ರಾಘಣ್ಣಿಗೆ ಕೂಡೋಲೆಕ್ಕ ಸ್ವಲ್ಪಮಟ್ಟಿಗೆ ಗೊತ್ತಿದೆ. ಅಪುರೂಪಕ್ಕೆ ಅವನ್ನ ನಮ್ಮ ಜೊತೆ ರಮ್ಮೀಗೆ ಕೂಡಿಸಿಕೊಂಡ್ರೆ ಒಂದೊಂದು ರೌಂಡಿಗೂ 50 ಪೈಸಾ ಕಲೆಕ್ಟ್ ಮಾಡಿ 16 ರೂಪಾಯಿ ಭರ್ತಿ ಆದ ತಕ್ಷಣ ಮುತ್ತಣ್ಣನ ಕೈಲಿ ಕೊಟ್ಟು ಕಾ ರ್ಟರ್ ಬಾಟ್ಲು ತರಿಸ್ತಾನೆ.

"ಮುವತ್ತೊಂದು. ಅಂದ-ಕ್ಯಾಲ್ಕುಲೇಟ್ ಮಾಡಿ

"ಅಂದ್ರೆ-ನಾಕು. ಬೆಕರ್ ನಂಬರ್ ನಾಕು-ಏಳೆಂಗಾಯ್ತು ಬಾಬು ಕೇಳಿದ ತುಸ ಬಿರುಸಾಗಿ.

"ಬಾಬು-ಹಂಗೆಲ್ಲಾ ತಕೋಬೇಡ ತಿಂಗ್ಳು ಇಸ್ವಿ ಜೊತೆ. ಬರೀ ಡೇಟ್ ತಕೊ" ರಾಘಣ್ಣಿ ಹೇಳಿದ.

"ಸರಿ-ಮೂರೂ ಒಂದು ನಾಕು.

ಬಾಬು ರಾಘಣ್ಣಿನ ದುರುಗುಟ್ಟಿಕೊಂಡು ನೋಡಿದ. ರಾಘಣ್ಣಿ ಯೋಚಿಸಿದ.

"ಬ್ಯೂಟೀ ! ಬ್ಯೂಟೀ ! ಈಗನೋಡು-ತಾರೀಖು ಮೂರು. ಒಂದು ತಿಂಗಳು-ಒಂದೂ ಎರಡು-ಅಂದ್ರೆ ಮೂರು. ಮೂರಕ್ಕೇ ಮೆಜಾರಿಟಿ. ಆದ್ದರಿಂದ ಮೂರು ಅಂತಿಟ್ಕೊ. ಈಗ ಆ ಏಳು ಇದೆಯಲ್ಲಾ-ಅದರಿಂದ ಮೂರನ್ನ ಕಳಿ....

"ನಾಕು" ಅಂದ ಬಾಬು.

"ನೋಡಿದ್ಯಾ ನ್ಯೂಮರಾಲಜೀ ಎಂದೂ ತಪ್ಪಾಗೊಲ್ಲ-ಏಳರಲ್ಲಿ ಮೂರು ಹೋದ್ರೂ ನಾಕು-ನಾಳೆಯಿಂದ "THUMSUP" ಅಂತ ಮೇಜಿನ ಮೇಲೆ ಬಲವಾಗಿ ಗುದ್ದಿದ.

11

ಗುದ್ದಿನ ರಭಸಕ್ಕೆ ನಮ್ಮ ಟೇಬಲ್ ಮೇಲಿದ್ದ ಹಿಪ್–ಇನ್–ಟೋರಿನೊ ಮೂರೂ ಗ್ಲಾಸುಗಳು ಹಾರಿ ಬಿದ್ದು ಚೂರು ಚೂರಾದವು. ಬಾಬು ಎದ್ದು ರಾಘಣ್ಣ ಭುಜ ಹಿಡಿದ.

ವಾತಾವರಣ–ಅಮ್ಜದ್‌ಖಾನ್ ಪೈಂಧಾಲ್‌ರ ನಡುವೆ ಫೈಟ್ ಸ್ಫೋಟ ವಾಗೋತರಹ ಇತ್ತು.

“ಬಾಬೂ–ತಾಳು ! ಇವತ್ತು ಡೇಟೇನು ?” ಅಂತ ಕಿರುಚಿದ ರಾಘಣ್ಣ.

“3–10–1985–ಏಕೆ ?”

“ಅಂದ್ರೆ ನೈನ್……9. ನಾನು ಹುಟ್ಟಿದ್ದು 6–4–1963–ಅಂದ್ರೆ ಟ್ವೆನ್ಟಿ….2–ಟೂ 9 ಅಂಡ್ 2–ಆಪೋಸಿಟ್ಟುಗಳು. ಅದಕ್ಕೇ ಗ್ಲಾಸ್ ಒಡ ದಿದ್ದು.” ರಾಘಣ್ಣ ಸಾಧಿಸಿದ.

ಬಾಬು ರಾಘಣ್ಣ ಭುಜದಿಂದ ತನ್ನ ಕೈ ತೆಗೆದ.

“ಷಹಭಾಸ್ ರಾಘಣ್ಣ. ನಿನ್ನನ್ನ ಯೂಕ್ಲಿಡು ಥರಾ ಪ್ರೊಫೆಸರ್ ಮಾಡಿ ಬಿಡಾನಾ–ಉಸ್ತಾದ್‌ಮಿಯಾ–ಇಸ್ಕ್ರೂತಿರುಗ್ಸೋಕೆ ನಿಂಗೀಗೇನ್ಬೇಕ್ಹೇಳು” ಅಂದ.

“ಹಿಪ್–ಇನ್–ಟೋರಿನೋನೇ ಇರ್ಲಿ–ಕ್ವಟರ್” ಅಂದ ರಾಘಣ್ಣ.

ಕ್ವಟರ್‌ನಲ್ಲಿ ಹಾಫ್ ಅವನ ಹೊಟ್ಟೇ ಸೇರೋಹೊತ್ಗೆ ರಾಘಣ್ಣ ಆಫ್ ಆದ....

ಛೀರೋ ಟು ಥಂ–ಥಮ್ಸಪ್ !” ಅಂತ ಒಂದು ಬಾರಿ ಕೂಗಿ ಹಾಗೇ ಥಮ್ಸಪ್ ಮಾಡಲ್‌ಗಳ ಜೊತೆ ಸೇರ್ಕೊಂಡ.

ನಂ ಕ್ಲಬ್ಬಿನಲ್ಲಿ

—ಆನಂದ್

ನಂ ಕ್ಲಬ್ಬಿನಲ್ಲಿ ಹಳೆ ಕಾಲದಿಂದಲೂ ಒಂದು ಸಂಪ್ರದಾಯ ಇದೆ. ರಾತ್ರಿ ಸದಸ್ಯರು ತಮ್ಮ ಕಾರುಗಳಿಗೆ ಹೋಗುವಾಗ, ವಾಚ್‌ಮನ್‌ಗಳು ಟಾರ್ಚ್ ತೋರಿಸ್ತಾ ಬರ್‍ತ್ತಾರೆ. ಕಾರು ಬೀಗ ತೆಗೆಯುವಾಗ. ಟಾರ್ಚ್ ಬೆಳಕು ಬೀಗದ ಮೇಲೆ: ಕಾರು ಸ್ಟಾರ್ಟ್ ಮಾಡಲು ಅನುಕೂಲ ಆಗುವಂತೆ ಬೆಳಕು Ignition Key ಮೇಲೆ ಬೀಳುವಂತೆ ಟಾರ್ಚ್ ಹಿಡಿಯುತ್ತಾರೆ ! 'ಯಾಕೆ ?' ಅಂತೀರಾ ? ಬರೀ ಹಣ್ಣಿನ ರಸ ಕುಡಿಯೋ ನಿಮಗೆ ಇದು ಅರ್ಥ ಆಗದೆ ಇದ್ದುದು ಆಶ್ಚರ್ಯವೇನಲ್ಲ ! !

* * * *

ಆ ದಿನ ಕ್ಲಬ್ಬಿನಲ್ಲಿ ಗಲಾಟೆ. ವೈದ್ಯರು, ಇದೇನು ಇನ್ನೇರಡು ಮೇಡಿಕಲ್ ಕಾಲೇಜು ಶುರು ಮಾಡ್ತಾರಂತಲ್ಲ ! ತೀರಾ ಅನ್ಯಾಯ ! ಇದನ್ನು ಖಂಡಿಸಬೇಕು ಇತ್ಯಾದಿ. ನಾವೆಲ್ಲ ದನಿಗೂಡಿಸಿ ಗಂಟಲು ಒಣಗಿಸಿಕೊಂಡೆವು· ನಾಣಿ ಮಾತ್ರ ಸುಮ್ಮನಿದ್ದ, "ಏನೋ ನಾಣಿ ನಿನ್ನ ಅಭಿಪ್ರಾಯ ಏನು ? ಅಂದೆ. ನಾಣಿ ನಿಧಾನವಾಗಿ ಹೇಳಿದ.. ಅಲ್ಲ ಕಣ್ರೊ Mushrooming of Medical Colleges ವಿಚಾರ ತಾನೇ ನೀವು ಗಲಾಟೆ ಮಾಡಿರೋದು ! ಆದರೆ ಕರ್ನಾಟಕದಲ್ಲಿ Mushroom ಗಳಿಗಿಂತ ಕಾಲೇಜುಗಳೇ ಜಾಸ್ತಿ ಇದೆಯಲ್ಲಾ ! "ಅಂದ, ಗಟ್ಟಿಯಾಗಿ ಹೇಳಬೇಡ, ಸರ್ಕಾರದವರಿಗೆ ಕೇಳಿಸಿ ಬಿಟ್ಟಿತು ಅಂದೆ !

* * * *

ಬಸ್ಸಿನಲ್ಲಿ ವೀರೇಶಿ

—ಅ.ರಾ.ಸೇ.

ವೀರೇಶಿ ಹಲವು ಕ್ಯಾಂಪಸ್ಸುಗಳ ನಡುಗಿಸಿದ ಧೀರ
ವೀರೇಶಿಯನು ಕಂಡು ಮೋಹಿಸಿದ ತರುಣಿಯರು.
'ನಾ ನಿನ್ನ........ ಎಂದು 'ಪ್ರೀತಿಸುವೆ' ಎನ್ನುವ ಮೊದಲೆ
'ಬೇಡವೇ ಬೇಡ ಹೊರಡೀಗಲೇ ಮೇಲೆದ್ದು
ಎಂದು ಬಂದಿದ್ದ ಮನ್ಮಥನ ಗೆದ್ದು.
ಬಣವೆಕಲ್ಲಿನ ಕ್ರಾಸಿನೊಳಗಂದು ಬಸ್ಸು
ನಿಂತಾಗ ಆಪೋರಿ ಗ್ರಹಚಾರಿ ಬರಲು ಮೇಲೇರಿ
ವೀರೇಶಿಯೆದೆ ಬಡಿತ ಹಲವಾರು ಬಾರಿ
ಆಯ್ತು ಮಿಸ್ಸು.
ಮೂವತ್ತು ಮಧುಮಾಸಗಳಕಂಡ ವಿರೇಶಿಯೆದೆಯೊಂದು
ಕಗ್ಗಲ್ಲ ಬಂಡೆ
ಅವನೆಂದೂ ಯಾರನೂ ನೆನೆನೆನೆದು ಬಿಟ್ಟಿಲ್ಲ
ನಿಟ್ಟುಸಿರ ಮಾಲೆ
ಆದರಾ ಹೊಯ್ಮಾಲೆ
ಕಿಲಕಿಲನೆ ನಗುನಗುತ ಬಳಿ ಬಂದು ನಿಂತಾಗ ಮನದಿ
ಮೂಡಿತು ಹೊಸಜೂಲೆ
ಅವಳು ಕೇಳಿದಳು 'ಸೀಟಿನಲಿ ಕೊಡಿ ಒಂದು ಮೂಲೆ'
ಅವಳ ಮಾತು
ವೀರೇಶಿಯೆದೆಯ ಕಗ್ಗಲ್ಲ ಬಂಡೆಯ ಕೊರೆದು ಮಾಡಿತ್ತು ತೂತು
ಅವಳ ಮುಂಗುರುಳುಗಳ ವಕ್ರಪಥದಲಿ ನಡೆದು
ಮನವಾಯ್ತು ಸ್ಪೈರಲ್ ಸ್ಪ್ರಿಂಗ್
ವೀರೇಶಿ ಹೊಡೆದ ದಂಗ್
ಮಂಗಾಪುರದಲವಳು ಮೈಸೋಕಿನಿಂತಾಗ ಕವಿದ ಚಿಂತೆಯು
ಝಳಕ್ಕೆಹರಣಗಳು ಕಳವಳಿಸೆ ಕರಣಗಳು ಹಳಹಳಿಸೆ
ವೀರೇಶಿ ತತ್ತರಿಸಿದ
ಕರುಣೆಯಿಲ್ಲದನಂಗ ಪುಷ್ಪಬಾಣಗಳಿಂದ ವೀರೇಶಿ
ಗೋಣನ್ನು ಕತ್ತರಿಸಿದ
ಬಸ್ಸಿಹಳ್ಳಿಯ ಸ್ಟಾಪಿನಲ್ಲಿ ಸುಗ್ಗಿದರು ಜನ, ಅವಳೇನನೋ

ಗೋಣಗಿ ಸರಿದು ನಿಂತಳು
ಅವನ ಕಾಲ ಮೇಲೆ,
ರನ್ನವಾ
ಕೋಲುಕೋಲನ್ನ ಕೋಲೆ,
ಕತ್ತುಪಟ್ಟಿಯ ಡೆಪ್ತ
ಸನ್ನತಿಗೆ ರಪ್ತ
ಅವಳ ಬೆನ್ನಿನ ಮೇಲೆ ಕಪ್ಪನೆಯ ಉದ್ದನೆಯ ಕೇಶರಾಶಿ
ಜೋಲು ಜೋಲನ್ನ ಜೋಲೆ
ಪೋನಿಟೈಲೋ ಕತ್ತೆಬಾಲವೋ ಅವಳ ಹೇರ್‌ಸ್ಟೈಲು,
ವೀರೇಶಿ ಐಲುಫೈಲು.
ಮೂಡಿತ್ತು ಎದೆಭಾರ ಏನೋ ವಿಷಾದ !
ಅವಳಿಗೀ ಹೊತ್ತು ಈ ವಿಭ್ರಮವ, ಯೌವನವ,
ಚೆಂದ ಚೆಲುವನು ನೀಡಿ, ಏನೊ ಮೋಡಿಯ ಹೂಡಿ,
ಬೇಟೆಯಾಡಲು ತನ್ನ, ತಂದನೇ ಕ್ರೂರ ವಿಧಿಯೆನ್ನುವ
ನಿಷಾದ.
ಮಲ್ಲಳ್ಳಿ ಬಂದಾಗ ಮತ್ತೊಂದು ನಿಟ್ಟುಸಿರ ಬಿಟ್ಟು ಚಿಂತಿಸಿದ
ವೀರೇಶಿ,
ನನ್ನ ಜೀವನ ಜೊತೆಗೆ ಚೆಲ್ಲಾಟವಾಡಲಿಕೆ ಕೊಟ್ಟರಿವಳಿಗೆ
ಯಾರು ಹಕ್ಕು ?
ನನ್ನಂಥ ಇಲಿಮರಿಗೆ ಈ ದಿವಸ ಈ ಹೊತ್ತು ಗಂಟು ಬಿದ್ದದ್ದೇಕೆ
ಈ ಗಡವ ಬೆಕ್ಕು ?
ಇವಳ ಚೆಲುವಿನ ಬಲೆಯ ಉರುಲುಗಣ್ಣಿಗೆ ಸಿಲುಕಿ
ಮುರಿದುಹೋಯಿತು ನನ್ನಸೊಕ್ಕು,
Somethings of beauty are a sorrow forever
ನಾನುಳಿದುಕೊಳ್ಳುವೆನೆ ಅಯ್ಯೋ **never never**
ಜೋಗಿ ಹಳ್ಳಿಯಲಿಳಿದು ಎತ್ತಹೋದಳೊ
ಅರರೆ
ಇನ್ನು ಬೇಯುತ್ತಲಿದೆ ಅವಳ ನೆನಪಿನ
ಬರೆರೆ
ಬರೆರೆ ಅಂದರೆ ಬರೆ
ಪೂತು ಮಯ್ಯುರೇ !

(ಕೃಪೆ ಆಕಾಶವಾಣಿ, ಭದ್ರಾವತಿ)

ಮುಖಾಮುಖಿ-೬

ಅಪ್ರಸ್ತುತ

ಅಪರಂಜಿಯಿದ್ದ ಕಾಡಿನ ಗುಂಡಿಗೊಟರುಗಳಲ್ಲೂ ಈ ವರ್ಷ ನೀರಿಲ್ಲ. ನಿನ್ನೆ ಮೊನ್ನೆಯಿನ್ನೂ ದೀಪಾವಳಿ, ಮುಂದಿನ ಚೈತ್ರದ ಕಾಮನ ಬೂದಿ ಆರಿಸುವ ಮಳೆ ಬರಬಹುದು. ಕಾಮನನ್ನು ಸುಟ್ಟರಲ್ಲವೇ ಬೂದಿ. ತಜ್ಞರು, ಶಾಲೆಗಳಲ್ಲಿ ಲೈಂಗಿಕ ಶಿಕ್ಷಣ ಕೊಡಬೇಕೆಂದು ವಾದಿಸುತ್ತಿರುವ ಈ ಸಂದರ್ಭದಲ್ಲಿ ಕಾಮನನ್ನು ಸುಡಲು ಅಸಾಧ್ಯವಾದ್ದರಿಂದ ಶಿಕ್ಷಣವನ್ನೇ ಕಾಮನ ಬದಲು ಸುಡಬೇಕೇ ? ಛೆ, ಛೆ, ಶಿಕ್ಷಣವೇ ಆಧುನಿಕ ಜ್ಞಾನಕ್ಕೆ ಕೀಲಿ ಕೈ ! ಇಲ್ಲದ ಬೂದಿಯನ್ನು ಕದರಲು ನಾನೇಕೆ ಬರಲಿ ಎಂದು ಮಳೆಯೂ ಬರುವುದು ಅನುಮಾನ, ಹಾಗಾದರೆ ಗತಿಯೇನು ?

ಇದು ಕಡೇ ಬೇಸಿಗೆ, ಮುಂದಲ ವರ್ಷ ಕ್ಷಯನಾಮ ಸಂವತ್ಸರ. ಅಪಶಕುನ, ಅಶುಭ ನುಡಿಯಬಾರದೆಂಬ ನಿಯಮಕ್ಕನುಗುಣವಾಗಿ ಅಕ್ಷಯ ಎಂದು ಕರೆಯುತ್ತಾರೆ.

ಅಪರಂಜಿ, ಚಿಂತಿಸುತ್ತಾ ಹೋಗುತ್ತಿರುವಾಗ ಕುರುಡ ತಿಮ್ಮಗ ಕಾಣಿಸಿದ.

"ಏನು ತಾಯೀ ಪಾಡಾಗದಿಯಾ ?" ಎಂದು ಕೇಳಿದ.

ಅಪರಂಜಿ ತನ್ನ ಕತ್ತನ್ನು ತಡವರಿಸಿಕೊಂಡಳು. ಕೊರವಂಜಿ ತನಗೆ ಕೊಟ್ಟಿದ್ದ ಚಿನ್ನದ ಹಾರವನ್ನು ಭದ್ರಮಾಡಿಕೊಂಡು, ಕುರುಡ ತಿಮ್ಮಗ ಕೈಚಳಕಕ್ಕೆ ಪ್ರಸಿದ್ಧಿ "ಏನು ತಿಮ್ಮಣ್ಣ ಎಲ್ಲಿಗೆ ಹೊಂಟೆ ?" ಎಂದು ಕೇಳಿದಳು.

ತಿಮ್ಮಣ್ಣ ಹೇಳಿದ–ಕುರುಡಾದ ಕಣ್ಣಿನ ರೆಪ್ಪೆ ಮುಚ್ಚಿಕೊಂಡು.

"ಅಪರಂಜೀ, ಇದು ನಮಗೆ ಸೊಬಲಗಾಲ, ಎಲ್ಲೆಲ್ಲಿ ನೋಡಿದರೂ ಒಂದು ದೊಂಬಿ, ಲೂಟಿ, ದರೋಡೆ ನಡೆಯುತ್ತಿರುತ್ತದೆ. ಅಲ್ಲದೆ ಹೆದ್ದಾರಿಗಳಲ್ಲಿ ಮುರಿದು ಬಿದ್ದಿರುವ ಲಾರಿಗಳನ್ನೇ ದೋಚಿದರೆ ಸಾಕು.

"ತಿಮ್ಮಣ್ಣ, ಪರರಸ್ವತ್ತು ಪಾಷಾಣ !"

ಕುರುಡ ತಿಮ್ಮಗ ಹೇಳಿದ "ಅಪರಂಜೀ, ಇದೇನು ಅರಿಚ್ಚಂದ್ರನ ಯುಗ ಅಲ್ಲ, ನಮ್ಮಂಥೋರು ಈ ಕಾಡು ಹಿಡಿದು ಕೆಟ್ಹೋಗಿ ಬಿಟ್ಟೆವು. ಇಲ್ಲೆಲ್ಲಾ ಏನೈತೆ ? ಹೋಗಬೇಕು ಪಟ್ಟಣಕ್ಕೆ, ಎಷ್ಟು ಬಿಲ್ಡಿಂಗುಗಳು ! ರೊಕ್ಕೆಲ್ಲಾ ಅಲ್ಲೇ ಸುರಿದೈತೆ. ನಾನು ಯಾಕಾರ ಇಲ್ಲಿಗೆ ಕುಡಿಯೋಕ್ಕೆ ನೀರಿಲ್ಲದ ಕಾಡಿಗೆ ಬಂದ್ನೆಪ್ಪಾ ಅಂದ್ಕೊಂಡು ಮತ್ತೆ ಹೊಂಟೆ ಪಟ್ಟಣಕ್ಕೆ. ಏನು ಸುಖ; ಮನಷಾಮುಂದ್ವರಿಬೇಕು ಅಂದ್ರೆ ಅಲ್ಲಿರ್ಬೇಕು.

ಅಪರಂಜಿ "ಮಾವನ್ಮನೆ ಸುಖವಾಗಿತ್ತೇ ತಿಮ್ಮಣ್ಣ ?"

ತಿಮ್ಮಗ : "ಎಂತೆಂತಾ ಮಹಾತ್ಮರು ಅಲ್ಲಿಗೆ ಬರ್ತಾರೆ ಅಪರಂಜೀ ಗೊತ್ತೇ ? ಲೀಡರ್ ಅಂದ್ರೆ ಮಾವನ ಮನೆ ಕಂಡ ಮೇಲೇ ಆಗೋದು, ನಾನು ಅಲ್ಲಿದ್ದಾಗ ಎಷ್ಟು ಸುಖ ಇತ್ತು ಗೊತ್ತೇ ?

ಅಪರಂಜಿ ಮತ್ತೆ ಇಲ್ಲಿಗ್ಯಾಕೆ ಬಂದೆ ?

ತಿಮ್ಮಗ ರೊಕ್ಕವೆಲ್ಲಾ ಮುಗೀತು, ಅದಕ್ಕೆ, ಸತತ ದುಡಿಮೆ ಬೇಕು ಅಪರಂಜೀ, ಇಲ್ಲೇನು ದುಡಿಮೆ ? ಆ ದೊಡ್ಡಣ್ಣ ನೋಡು. ರಸ್ತೆ ಮೇಲೆ ಲಾರಿ ಬರ್ತಿದ್ದಾಗ ಕಂಡವರ ಮಕ್ಕಳನ್ನು ಓಡಿಸಿ, ಆಕ್ಸಿಡೆಂಟಾದ ಮೇಲೆ ಪಂಚಾಯ್ತಿ ಹೇಳಿ ನೂರೋ ಇನ್ನೋರೋ ದುಡೀತಾನೆ, ಆಕ್ಸಿಡೆಂಟಾದ ಲಾರಿ ಒಳ್ಗಿದ್ದ ಬೆಂಕಿ ಪಟ್ಣ, ಬಾಳೇಹಣ್ಣು, ವಿಳೇದೆಲೆ, ಸಕ್ರೆ ಅಂಥಾದೇನಾರ ಇದ್ರೇ ರಾತ್ರೋ ರಾತ್ರಿ ಕದ್ದು ರೂಪಾಯಿ ಮೂಲು ಎಂಟಾಣೆಗೆ ಮಾರಿಕೊಂಡು ...... ಏನು ಇದರಲ್ಲೆಲ್ಲಾ ಉದ್ಧಾರಾಗದು ?

ಅಪರಂಜಿ ತಿಮ್ಮಣ್ಣ, ನಮ್ಮ ಸುತ್ತಮುತ್ಲ ಹಳ್ಳೀಲಿ ಸಾವಿರಾರು ಜನ, ಜಾನ್ವಾರು ಇದ್ದಾರಲ್ಲಾ, ಅವರಿಗೆ ನೀರಿಲ್ಲ, ಮೇವಿಲ್ಲ. ಅಂಥಾರನ್ನೆಲ್ಲಾ ಬಿಟ್ಟು........

ತಿಮ್ಮಗ ಅವರ ಪರಿಹಾರಕ್ಕೆ ಬರೋ ದುಡ್ಡು ನನ್ನಂಥರ ಕೈಗೆ ಸಿಕ್ಕೀತೇ ಅಪರಂಜಿ ?

ಅಪರಂಜಿ ಸಾವಿರಾರು ಕಂದಮ್ಮಗಳು, ಹಾಲಿಲ್ಲ ಅನ್ನ, ಮುದ್ದೆ ಕಂಡಿಲ್ಲ--------

ತಿಮ್ಮಗ ನಾನೂ ಹಾಗೇ ಆಗಲೇ ಅಪರಂಜಿ ? ಇವರಿಗೆ ಅನ್ನ ಇಲ್ಲ ಅಂತ ಈ ಜನಕ್ಕೆ ಕೊಬ್ಬು ಸ್ವಲ್ಪವಾದರೂ ಕಡ್ಮೆ ಆಗಿದೆಯೇ ? ಹೆಂಡದ ಮಾರಾಟ

ಕಮ್ಮಿ ಆಗಿದೆಯೋ, ಹೋಟ್ಲಿಗೆ ವ್ಯಾಪಾರ ಕಷ್ಮೆ ಆಗಿದೆಯೋ, ಸಿನಿಮಾಕ್ಕೆ ಹೌಸ್ ಫುಲ್ ಆಗದು ತಪ್ಪಿದೆಯೋ ? ಅಪರಂಜಿ ಕಂಡವರಿಗೆ ಮರುಗಿ, ನಿನ್ನ ಗತಿಯೇನು ಅಂತ ಯೋಚನೆ ಮಾಡೋದು ಬಿಟ್ರೆ, ನೀನೇ ಕೆಟ್ಟೆ, ಕಂಡವರು ಉದ್ಧಾರ ಆಗಲಿಲ್ಲ,

ಅಪರಂಜಿ ಮಳೆ ಬೇಕು ತಿಮ್ಮಣ್ಣ, ಮಳೆ ತರಿಸಬೇಕು.

ತಿಮ್ಮಗ ದೇವರು ಬಿಟ್ರು, ದಿಂಡ್ರು ಬಿಟ್ರು, ಮಳೆ ಹೆಂಗೆ ಬರ್ತೈತೇ ? ಹೋದ್ರೆ ಉತ್ತರ ದೇಸಕ್ಕೆ ಪ್ರಳಯ ಅಪರಂಜೀ ಪ್ರಳಯ, ಮಳೆ ಇಲ್ಲ,

ಅಪರಂಜಿ ತಿಮ್ಮಣ್ಣ ಇವರ ಕಷ್ಟ ಹೋಗೋಹಾಗೆ ಮಾಡುವುದು ಹೇಗೆ ?

ತಿಮ್ಮಣ್ಣ ನಮ್ಮ ಕಷ್ಟ ನಾವು ಕಳಕಂಡ್ರೆ ಸಾಕು. ಒಂದು ಪಿಳಾನ್ ಹೇಳ್ತಿನಿ, ನೀನು ಬಾ ನನ್ನ ಜೊತೆ, ನಿನ್ನಂಥ ಚಾಲೂಕು ಹುಡ್ಗಿ ಇದ್ರೆ, ಕೋಟಿ ಗಟ್ಲೆ ದುಡಿದೇನು ?

ಅಪರಂಜಿ ನನ್ನ ಕಸುಬು ನಾನು ಬಿಡಲಾರೆ ತಿಮ್ಮಣ್ಣ, ದೇವ್ರು ಇದಾನೆ.

ತಿಮ್ಮಗ ಖಂಡಿತ ಐದಾನೆ, ದರೋಡೆಗಾರರಿಗೆ, ನನ್ನಂಥವರಿಗೆ ಪ್ರತಿದಿನ ಏನಾದ್ರೂ ಕೊಡಿಸ್ತಾನೆ, ಗುಣ, ಅನ್ನೋರ್ನೆಲ್ಲಾ ಕಾಡಿನಲ್ಲೇ ಇಡ್ತಾನೆ. ಹಣ ಇದ್ದರೆ, ಮೆಡಿಕಲ್ ಕಾಲೇಜು, ದೊಡ್ಡ ದೊಡ್ಡ ಕೆಲ್ಸ, ಮೆಂಬರ್ಶಿರಿ ಎಲ್ಲಾ ಕೊಡಿಸ್ತಾನೆ, ನೀನೇ ಗತಿ ಅಂದರೆ ಮಳೆ ಮಳೆ ಎಲ್ಲಾ ಕಳಿತಾನೆ..........

ಅಪರಂಜಿ ನೀನು ಹೋಗು ತಿಮ್ಮಣ್ಣ, ಏನೇ ಆಗ್ಲಿ ನನಗೆ ಅವನೇ ಗತಿ.

ಏನಾದರೂ ಒಂದು ಸ್ಪೆಷಲ್

— ಸುಮಿತ್ರ ಅಡಿಗ

"ನಂದೂ ನಂದಾ ನಂದಿತಾ ...... ಏ ಹಾಳಾದೋಳೇ ನಂದೀ ... ರೀ ಇವರೇ ನಂದಿತಾ ....

ಕನ್ನಡಿ ಮುಂದೆ ತಲೆ ಬಾಚಿಕೊಳ್ಳುತ್ತಾ ಸತೀಶ ಕೂಗಿಕೊಂಡ. ನಂದಾ "ಬರ್ತೀನಿ ತಡೀರಿ... ... ಯಾಕೆ ಹಾಗೆ ಒಂದೇ ಸಮನೆ....... ಕೆಟ್ಟ ಕ್ಯಾಸೆಟ್ ಹಾಡಿನ ಪದ ಒದರೋ ಹಾಗೆ; ಕೂಗಿದ್ದೇ ಕೂಗಿದ್ದು"....ಗೊಣಗಿದಳು.

"ಅಲ್ಲ ಕಣೇ ಅಷ್ಟು ಹೊತ್ತಿಂದ ಕರೀತಾನೇ ಇದೀನಿ. ಎಲಾ ಇವನು ಯಾಕೆ ಹೀಗೆ ಬಡ್ಕೋತಾ ಇದಾನೆ ...... ತಿಳ್ಕೊಳ್ಳೋಕಾದರೂ......ಏನೇ........ನಂದೂ ...... ನಂದಾ .. ...ನಂದೀ ...ಯಾಕೇ ಮಲಗಿದೀಯೇನೇ ಅಡಿಗೇ ಮನೇಲಿ? ಸೊಗಸಾದ ಬೆಡ್ ರೂಂ ಇದೆಯಲ್ಲೇ ......" ಸತೀಶ ಮತ್ತೆ ಕೂಗಿದ.

ನಂದಾ ಬರಲಿಲ್ಲ. ಅಡಿಗೇ ಮನೆಯಿಂದಲೇ ಕೂಗಿದಳು. "ಬರ್ತೀನಿ ತಡೀರಿ ಯಾಕೆ ಹಾಗೆ ಅರಿಚ್ತೀರಿ? ಗ್ಯಾಸ್ ಖಾಲಿ ಆಗಿ ಒಂದು ವಾರ ಆಯ್ತು... "

"ಸ್ಟೋವಿಲ್ವೇನೆ ...."

"ಸೀಮೇ ಎಣ್ಣೆ ಮುಗಿದು ಹದಿನೈದು ದಿನ ಆಯ್ತು"

"ಕಟ್ಟಿಗೇ ಒಲೇ ಹೊತ್ಸಿಸ್ಬಾರ್ದೇ"

"ಈ ಊರ್ನಲ್ಲಿ ಸಿಗೋ ಕಟ್ಗೇ ಉರಿಯೋದಿಲ್ಲಾ ಅಂತ ತಾನೇ ಸ್ಟೋವ್ ತಂದಿದ್ದು. ಸೀಮೇಎಣ್ಣೆ ಇಲ್ಲ ಅಂತ ತಾನೇ A. E. H. ಮಾಡ್ಸಿದ್ದು. ಕರೆಂಟ್ ಇಲ್ಲ ಅಂತ ತಾನೇ ಗ್ಯಾಸ್ ಸಿಲಿಂಡರ್ ತಂದದ್ದು ...."

"ಹಾಗಾದ್ರೆ ಏನು ಮಾಡ್ಲೀ ಹೇಳು? ಈಗ ಏನು ಬರ್ತೀಯೋ ಇಲ್ವೋ

"ಅಡಿಗೆ ಆಗ ಬೇಕೋ ಬೇಡವೋ ?.... ..."

ಸತೀಶ ಅಡಿಗೆ ಮನೆಗೆ ನುಗ್ಗಿ, ನಂದಿತಾಳ ಕೈ ಹಿಡಿದು ಎಳೆದ.

"ಛೀ .. ಇದೇನ್ರೀ ನಾಚಿಕೆಗೇಡು. ಫಕ್ಕನೆ ಮಕ್ಕಳು ಬಂದು ನೋಡಿಯಾವು. ಬೆಳಿಗ್ಗೆ ಇಷ್ಟು ಹೊತ್ತಿಗೆ ಏನಿದು. ಕೈ ಬಿಡ್ರಿ.. ..."

"ಛೇ, ಏನೂ ಇಲ್ಲ...ನೋಡಿಲ್ಲಿ "ಇವತ್ತು, ದೊಡ್ಡ ಆಫೀಸರ್ ಬರ್‍ತಾರೆ ..."

"ನಿಮ್ಮ ಕರ್ಮ, ಬರಲೇಳಿ ..... ನನಗೇನಂತೆ ? "

"ಅಲ್ವೇ ಹೇಳೋದು ಸ್ವಲ್ಪ ಕೇಳ್ತಿಯಾ ? "

"ಬೇಗ ಹೇಳಿ ಮುಗ್ಸಿ"

"ಇವೊತ್ತೇನಾದ್ರು ಸ್ಪೇಷಲ್ ಆಗಬೇಕು."

"ತಣ್ಣೀರು ರಿಗ್‌ನಿಂದ ತಂದದ್ದು ಉಪ್ಪು "

"ಎಷ್ಟು ಅನುಕೂಲ ಮಾಡಿಕೊಟ್ರು ನಿನ್ನ ಹಣೇಬರಹ ಇಷ್ಟೇ. ಶುದ್ಧ ಸೋಮಾರಿ "

"ಈ ಊರಿಗೆ ಯಾಕೆ ಬಂದ್ರಿ ? ಬೇರೆ ಯಾವ ಜಾಗವೂ ಇರಲಿಲ್ಲೇ ? "

"ಇತ್ತು. ಚಂಡೀಗಡ, ಗುರುದಾಸ್‌ಪುರ, ಟೆಹರಾನ್, ಬೀರತ್, ಟ್ರಿಪೋಲಿ, ಈ ಊರು ಇಷ್ಟೂ ಇತ್ತು ಇದರಲ್ಲಿ ಈ ಊರೇ ಉತ್ತಮ ಅಂತ ಆರಿಸಿಕೊಂಡೆ"

"ಅನುಭವಿಸಿ ಸುಖಾನ "

"ಆಫೀಸ್‌ಗೆ ಹೊತ್ತಾಯ್ತು, ಕಾಫೀನಾದ್ರೂ ಕೊಡ್ತೀಯಾ ? "

"ಹಾಲು ಬಂದಿಲ್ಲ, ಹೋಟೆಲಿಗೆ ಹೋಗಿ ಇಲ್ಲದಿದ್ರೆ ಆಫೀಸಿಗೇ ತರಿಸಿ ಕೊಳ್ಳಿ. ಖರ್ಚಿಗೆ ಎರಡುರೂಪಾಯಿ ಕೊಡ್ತೀನಿ, "

"ನಾನು ದುಡಿದದ್ದು, ನನಗೇ ದಾನಕೊಡ್ತೀಯಾ   ಹೊರಟೆ ಆಫೀಸಿಗೆ ಬರೋ ಹೊತ್ತಿಗಾದ್ರೂ   ಏನಾದ್ರೂ   "

"ಮತ್ತೆ ಯಾಕೆ ಬರ್ತೀರಿ ಹಾಸಿಗೆ ತೆಗಿಸಿಕೊಂಡು ಹೋಗಿ, ಅಲ್ಲಿ   "

"ಹಾಸಿಗೆ ಯಾತಕ್ಕೆ   "

"ನಿಮ್ಮ ಆಫೀಸರ್ ದೂರದಿಂದ ಬಂದಿರ್ತಾರೆ, ಸ್ಪೆಷಲ್ ಹಾಸಿಗೆ ಹೊದಿಕೆ ಹಾಯಾಗಿ ಮಲಗಲಿ.



"ಮಂತ್ರಿಗಳ್ಹತ್ರ ಮೆಡಿಕಲ್ ಸೀಟ್ ಸಿಗದಿದ್ರೆ ಕಾಲೇಜ್ನಾದ್ರೂ ಕೊಡಿ ಅನ್ನಿ

ಕಾರನು ದಬ್ಬು

—ಅ.ರಾ.ಸೇ.

ಓ ಭುವನೇಶ್ವರಿ ಕನ್ನಡ ಮಾತೆ
ಶುಭಮಂಗಳ ಸುಖಸಂಪದದಾತೆ
ಹರಿಯದು ಹಂಪೆಯು ಕಲ್ಲಿನ ತೇರು
ಅದಕೆಂದೇ ಬಂದಿದೆ ಈ ಕಾರು.

ಶ್ರೀ ನೃಪತುಂಗರ ಕಾವ್ಯದ ಕನಸು
ನಿನ್ನಾಶೀರ್ವಾದದ ಸವಿನನಸು
ಈ ಕಾರಿಗೆ ಸುರಿದಿದೆ ಬಲು ರೊಕ್ಕ
ಮೆರವಣಿಗೆಯ ಸಡಗರ ಮರೆದುಃಖ

ಹಾರನ್ ಆಯಿತು ಬಲು ಬಲು ಜೋರು
ಉಘೇ ಚಾಂಗು ಘೋಷಣೆ ನೂರಾರು
ಹಾಡಿದ ಗಾಯಕ ನುಡಿಸಿದ ವೈಣಿಕ
ಕವಿ ಬರೆದನು ಕಬ್ಬವ ಹಲವಾರು
ಏತಕೊ ಹೊರಡದೆ ನಿಂತಿದೆ ಕಾರು
ಮುಟ್ಟುವ ಗುರಿಯೋ ಬಲು ಬಲು ದೂರ
ಕಾರನು ಪರಿಕಿಸು ಕನ್ನಡ ಶೂರ
ಬ್ರೇಕು ಕ್ಲಚ್ಚು ಬ್ಯಾಟರಿ ಪಿಸ್ಟನ್ ರಿಂಗ್
ಟೈರು ಟ್ಯಾಂಕು ಬೆಲ್ಟ್ ಮೋಟಾ ಸ್ಟೀರಿಂಗ್
ಎಲ್ಲವು ಓಕೆ ಹೊರಡದಿದೇಕೆ
ಸೆಲ್ಫ್ ಸ್ಟಾರ್ಟರ್ ಕೆಟ್ಟಿದೆ ತಡವೇಕೆ

ತೋಳೇರಿಸು ತುಟಿಕಚ್ಚೋ ಸುಬ್ಬು
ಒನ್, ಟೂ, ತ್ರೀ, ಆಫ್, ಕಾರನು ದಬ್ಬು

(ಕೃಪೆ ; ಆಕಾಶವಾಣಿ, ಭದ್ರಾವತಿ)

ಶಿಕ್ಷಣದಲ್ಲಿ ಸುಧಾರಣೆ

—ಕಿಟ್ಟು

ಪ್ರಸಕ್ತ ಶಿಕ್ಷಣ ವಿಧಾನದ ಬಗ್ಗೆ ಪ್ರೈಮ್ ಮಿನಿಸ್ಟರಿಂದ ಪ್ರೈಮರಿ ಟೀಚರ್ ವರೆಗೆ ಎಲ್ಲರೂ ಅಸಮ್ಮತಿ ವ್ಯಕ್ತಪಡಿಸಿದ್ದಾರೆ. ಸುಧಾರಣೆಯಾಗಬೇಕು ಎಂದಿದ್ದಾರೆ. ಆದರೆ ಈ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಈವರೆಗೆ ಯಾರೂ ಕೇಳದಿರುವುದು ನನ್ನ ಗಮನಕ್ಕೆ ಬಂತು. ಮಸಾಲೆ ಅರೆಯುವವರು ಕೋಳಿ ಅಭಿಪ್ರಾಯ ಕೇಳುತ್ತಾರೆಯೇ ಎಂದು ವಿದ್ಯಾರ್ಥಿಗಳು ಅಂದುಕೊಂಡಿರಬಹುದು, ಆದರೆ ಯಾವುದೇ ಬದಲಾವಣೆಯನ್ನು. ವಿದ್ಯಾರ್ಥಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು ಎಂದು ನನಗನ್ನಿಸಿದ್ದರಿಂದ, ನೇರವಾಗಿ ನಮ್ಮೂರಿನ ವಿದ್ಯಾರ್ಥಿ ಮುಖಂಡ ಗೋಪುವಿನ ಬಳಿ ಹೋದೆ. ನಾನು ಬಂದ ಕಾರಣ ತಿಳಿಸಿದೆ. 'ನಾಲ್ಕು ಸಬ್ಜೆಕ್ಟ್ ಗೋತಾ ಆಗಿದೆ. ಸಪ್ಲಿಮೆಂಟರಿ ಪರೀಕ್ಷೆಗೆ ತಯಾರಾಗುತ್ತಿದ್ದೇನೆ, ಜಾಸ್ತಿ ಟೈಮಿಲ್ಲ. ಬೇಗ ಬೇಗ ನಿನ್ನ ಪ್ರಶ್ನೆ ಕೇಳಿ ಜಾಗ ಬಿಡು' ಎಂದ,

ನಾ : ಶಿಕ್ಷಣ ವಿಧಾನದಲ್ಲಿ ಸುಧಾರಣೆ ಬೇಕು, ಎಂದು ಎಲ್ಲರೂ ಬೊಬ್ಬೆ ಹಾಕುತ್ತಿದ್ದಾರೆ, ವಿದ್ಯಾರ್ಥಿ ಪ್ರತಿನಿಧಿಯಾಗಿ ನಿನ್ನ ಅಭಿಪ್ರಾಯವೇನು ?

ಗೋ ಈಗ ಬೊಬ್ಬೆ ಹಾಕುತ್ತಿರುವವರೆಲ್ಲರೂ ಹಳೆಯ ವಿಧಾನದಲ್ಲಿ ಕಲಿತು ಪಾರಾಗಿ, ನಮಗೆ ಹೊಸ ಕಷ್ಟಗಳನ್ನು ಗಂಟು ಹಾಕಲು ನೋಡುತ್ತಿದ್ದಾರೆ! ಇದರ ಬಗ್ಗೆ ನಾವು ವಿದ್ಯಾರ್ಥಿಗಳು ಸೇರಿ ಪ್ರತಿಭಟನೆಯ ನಿರ್ಧಾರ ಕೈಗೊಳ್ಳುತ್ತೇವೆ.

ನಾ ಅಂದರೆ ಸುಧಾರಣೆಯ ಅಗತ್ಯವಿಲ್ಲವೇ ?

ಗೋ · ಇಲ್ಲ, ಏಕೆಂದರೆ ವಿದ್ಯಾರ್ಥಿಗಳಲ್ಲಿ ಎರಡು ಗುಂಪು. ಒಂದು ಬುದ್ಧಿವಂತರೆಂದು ಇನ್ನೊಂದು ದಡ್ಡರೆಂದು. ಬುದ್ಧಿವಂತರು ಏನು ಸುಧಾರಣೆ ತಂದರು ಪಾಸು ಮಾಡುತ್ತಾರೆ. ಇನ್ನು ದಡ್ಡರು. ಇವರಲ್ಲಿ ಮತ್ತೆ ಎರಡು ಗುಂಪುಗಳಿವೆ, ಕಾಪಿ ಹೊಡೆಯುವವರು. ಕಾಪಿ ಹೊಡೆಯದೆ ಫೇಲಾಗುವವರು. ಕಾಪಿ ಹೊಡೆಯುವವರು ತಮ್ಮ ವಿಧಾನಗಳಲ್ಲಿ ವರ್ಷ ವರ್ಷ ಸುಧಾರಣೆಗಳನ್ನು ಮಾಡುತ್ತಲೇ ಬಂದಿದ್ದಾರೆ! ಫೇಲಾಗುವವರು ಹೇಗೂ ಫೇಲಾಗುತ್ತಾರೆ. ಸುಧಾ

ರಣೆ ತರಲೇ ಬೇಕೆಂದಿದ್ದರೆ, ಪರೀಕ್ಷೆಗೆ ಮುನ್ನ ಲೀಕ್ ಆಗುವ ಪ್ರಶ್ನೆ ಪತ್ರಿಕೆಗಳ ಧಾರಣೆ ಕಡಿಮೆಯಾಗಲಿ. ಎಲ್ಲರೂ 300–400 ರೂ. ಕೊಟ್ಟು ಪ್ರಶ್ನೆ ಪತ್ರಿಕೆ ಕೊಳ್ಳಲಾರರು. ಈ ಧಾರಣೆಯಲ್ಲಿ ಸುಧಾರಣೆಯಾಗುವುದಾದರೆ ತುಂಬಾ ಸಂತೋಷ!

ನಾ ಶಿಕ್ಷಣ ಕ್ಷೇತ್ರದ ಎರಡು ದೊಡ್ಡ ಅನಿಷ್ಟಗಳಾದ ಕಾಪಿ ಹೊಡೆಯುವುದು ಹಾಗೂ ಪ್ರಶ್ನೆ ಪತ್ರಿಕೆ ಲೀಕ್ ಆಗುವುದು ತಪ್ಪಿಸಲು ಸಾಧ್ಯವಿಲ್ಲವೆ ?

ಗೋ ವಿದ್ಯಾರ್ಥಿಗಳು ಯಾರನ್ನು ಅನುಕರಿಸುತ್ತಾರೆ ? ರಾಜಕೀಯ ನಾಯಕರನ್ನು ತಾನೇ ? ಚುನಾವಣೆಗಳಲ್ಲಿ ಅಭ್ಯರ್ಥಿಗಳು ಇಷ್ಟೇ ಖರ್ಚು ಮಾಡಬೇಕು ಎಂದು ನಿಗದಿಪಡಿಸಿರುತ್ತದೆ. ಆದರೂ ಭ್ರಷ್ಟಾಚಾರ ತಪ್ಪಿಸಲು ಸಾಧ್ಯವಾಗಿದೆಯೇ ? "ಯಥಾ ಅಭ್ಯರ್ಥಿ ತಥಾ ವಿದ್ಯಾರ್ಥಿ"

ನಾ ಶಿಕ್ಷಣದ ಜೊತೆಗೆ ವೃತ್ತಿ ಶಿಕ್ಷಣವನ್ನೂ ಕಡ್ಡಾಯ ಮಾಡಿದರೆ ಹೇಗೆ ?

ಗೋ ಇದು ತುಂಬಾ ಅಪಾಯಕರ. ಈಗ ಕೆಲವು ವಿದ್ಯಾರ್ಥಿಗಳು ಮಾತ್ರ ಚಾಕು, ಚೂರಿ ಹಿಡಿದುಕೊಂಡು ಕಾಲೇಜಿಗೆ ಬರುತ್ತಾರೆ. ವೃತ್ತಿ ಶಿಕ್ಷಣ ಕಡ್ಡಾಯವಾದರೆ ಪ್ರತಿಯೊಬ್ಬರೂ ಚಾಕು, ಸುತ್ತಿಗೆ, ಗರಗಸ. ಕತ್ತಿ ಹಿಡಿದು ಬರುತ್ತಾರೆ. ಅಧ್ಯಾಪಕರುಗಳ ಬಟ್ಟೆಗೆ. ಹುಡುಗಿಯರ ಡೆಸ್ಕಿಗೆ ಪೈಂಟ್ ಬಳಿಯುತ್ತಾರೆ. ಶಿಕ್ಷಣ ನಿವೃತ್ತಿಯಾಗಿ ಶಿಕ್ಷಕನ ಹೆಣ ಬೀಳುತ್ತದೆ.

ನಾ : ಕಡೆಯ ಪ್ರಶ್ನೆ. 10+2+3 ಪದ್ಧತಿಯ ಬಗ್ಗೆ ನಿನ್ನ ಅಭಿಪ್ರಾಯ. ವೇನು ?

ಗೋ (ಬೇಸರದಿಂದ) ನೋಡು ನನಗೆ ಮ್ಯಾಥ್ಸ್ ಎಂದರೆ ಮುಂಚಿನಿಂದ ತಲೆನೋವು ಅದಕ್ಕೇ ಕಾಲೇಜಿನಲ್ಲಿ ಆರ್ಟ್ಸ್ ಕಾಂಬಿನೇಷನ್ ತೆಗೆದುಕೊಂಡಿದ್ದೇನೆ. ಈ ಸಮೀಕರಣ ಕೇಳಿ ನನ್ನ ತಲೆ ತಿನ್ನಬೇಡ.

ನಾ ಸಮೀಕರಣವಲ್ಲವ್ವೋ ಅದು. ಈಗಿನ ಶಿಕ್ಷಣ ಪದ್ಧತಿ. ಮೊದಲು ಹತ್ತು ತರಗತಿಗಳು, ಪಿ.ಯು.ಸಿ ಎರಡು ವರ್ಷ. ಡಿಗ್ರಿ ಮೂರು ವರ್ಷ.

ಗೋ ಓ! ಹಾಗೊ? 15+0 ಎಂದು ಕರೆದರೆ ಎಲ್ಲರಿಗೂ ಅರ್ಥ ವಾಗುತ್ತದೆ. ಅದು ಬಿಟ್ಟು 10+2+3 ಎಂದು ಏಕೆ ಕರೆಯಬೇಕು.

ನಾ 15 ಸರಿ. ಸೊನ್ನೆ ಯಾಕೆ ?

ಗೋ : ಹದಿನೈದು ತರಗತಿಗಳಾದ ನಂತರ ಉದ್ಯೋಗ ಸೊನ್ನೆ! ನನ್ನ ಒಟ್ಟು ಸಂದರ್ಶನದ ಫಲಿತಾಂಶವೂ ಅಷ್ಟೇ ಎಂದುಕೊಂಡು ಗೋಪುಬಿಗೆ ವಿದಾಯ ಹೇಳಿದೆ.



"ಬಸ್ ದರ ಏರ್ದಾಗ್ನಿಂದ ಓಡೋದನ್ನ ಅಭ್ಯಾಸ ಮಾಡ್ತಿದಾರೆ!"

ಕ್ರಾಸ್ ಲಿಂಕ್

—(ದೂರ)ವಾಣಿ

ಮೊನ್ನೆ ನನ್ನ ಸ್ನೇಹಿತನಿಗೆ ಫೋನ್ ಮಾಡಿದೆ–ಅಲ್ಲ, ಮಾಡಲು ಯತ್ನಿಸಿದೆ. ಆರು ಅಂತ ರಿಂಗ್ ಮಾಡಿದೆ. ಟಕ್ ಅಂತ ಶಬ್ದ ಆಯಿತು. ತಕ್ಷಣ ಅಶರೀರ ವಾಣಿಗಳು ಎರಡು ಶುರುವಾದವು.

ಅ.ವಾ. ೧ 'ರಾತ್ರಿ ಲಾರೀ ಬರಲಿಲ್ಲ !'

ಅ.ವಾ. ೨ ಬರಬೇಕಿತ್ತಿಲ್ಲ, ರಾಜು ಕಳಿಸಿದ್ದ ?"

ಎಲ್ಲಿಗೆ ಕಳಿಸಿದ್ದನೋ ! ಬಾರ್ಡರ್ ಹತ್ರ ಕಾದು ಕಾದು ಸುಸ್ತಾಯ್ತು, ಸೊಳ್ಳೆ ಕಾಟ ಬೇರೆ ! ಯಾರಾದ್ರೂ ಬರ್ತಾರೆ ಅಂತ ಭಯ !

"ಯಾರು ಬರ್ತಾರೆ ಅಷ್ಟೊತ್ತಿನಲ್ಲಿ ?"

"ಇನ್ಯಾರು ಯಮದೂತರು !"

"ಇವತ್ತು ರಾಜುನ ವಿಚಾರಿಸ್ತೀನಿ; ಲಾರೀ ಕಳಿಸೋದು ಅಂದ್ರೆ ಮಕ್ಕಳಾಟ ಅಂದುಕೊಂಡಿದ್ದಾನೆ"

"ಸರೀ, ಬರ್ತೀನಿ"

(ಈ ಸಂಭಾಷಣೆಯ ಗೂಢಾರ್ಥ ಜೀವನದ ವ್ಯವಹಾರಗಳಲ್ಲಿ ಪರಿಣತರಾದ ಅಪರಂಜಿ ಓದುಗರಿಗೇ ಬಿಟ್ಟಿದ್ದೇನೆ !)

ಇನ್ನೊಂದು ದಿನ ಫೋನ್ ಟ್ರೀನ್ ಟ್ರೀನ್ ಅಂತು ರಿಸೀವರ್ ತೊಗೊಂಡೆ. ಮೌಂಟ್ ಕಾರ್ಮಲ್ ಕಾಲೇಜಾ ?" ಅಂತು ಮಂಜುಳ ಧ್ವನಿ. "ಹ್ಞೂ ಅಂದೆ. "ಮಾರ್ಕ್ಸ್‌ಕಾರ್ಡ್ ಯಾವಾಗ ಕೊಡ್ತೀರಾ ?"

"ಈ ವರ್ಷ ಮಾರ್ಕ್ಸ್ ಕಾರ್ಡ್ ಕೊಡಲ್ವಂತೆ !"

"ಅ್ಞ ! ಯಾಕಂತೆ ?"

"ಕೊಟ್ರೇನು ಪ್ರಯೋಜನ ?" ಅದೇನು ತಿನ್ನೋ ವಸ್ತುನೇ ?" ಮಂಜುಳ ಧ್ವನಿಗೆ ಈಗ ಗೊತ್ತಾಯ್ತು, ತಾನು ರಾಂಗ್ ನಂಬರ್ ಮಾಡಿದೀನಿ ಅಂತ. ಧಪ್ ಅಂತ ರಿಸೀವರ್ ಕೆಳಗೆ ಇಡ್ತು.

ಭಾನುವಾರ ಮಧ್ಯಾಹ್ನ. ಸ್ವಲ್ಪ ನಿದ್ದೆ ಮಾಡುವ ಅಂದ್ರೆ ಫೋನ್ ರಿಂಗಿತು. ಬೇಜಾರಿನಲ್ಲೇ 'ಹಲೋ' ಅಂದೆ. ಪಾರ್ಥ ಇದಾನಾ ?"

"ಇಲ್ಲ" ನಿಜ ತಾನೇ ನಾನು ಹೇಳಿದ್ದು.

"ಎಲ್ಲಿ ಹೋಗಿದಾನೆ ?"

"ಗೊತ್ತಿಲ್ಲಪ್ಪ" Technically ನಾನು ಹೇಳಿದ್ದು ಸರಿ.

"ಯಾರು ಮಾತಾಡೋದು ?"

"ಪಾರ್ಥನ ಅಪ್ಪ !"

"(ಪರಿಸ್ಥಿತಿ ಬಿಗಡಾಯಿಸಿತು !)

"ನಮ್ಮಪ್ಪ ತೀರಿಕೊಂಡಿದಾನೆ ಅಂದಿದ್ದ ಪಾರ್ಥ ?

"ಹೌದು, ನಾನು ಸ್ವರ್ಗದಿಂದ ಮಾತಾಡ್ತಿರೋದು !" ಆ ಪ್ರಾಣೀಗೆ ಧೈರ್ಯ ಉದುಗಿತು. ಫೋನ್ ಡಿಸ್ಕನೆಕ್ಟಾಯಿತು !

ಯಾಕೆ ಹೇಳುಕ್ಕೆ ಬಂದೆ ಅಂದರೆ, ರೌದ್ರ, ಭೀಬತ್ಸ, ಶೃಂಗಾರ ಇತ್ಯಾದಿ ಗಳನ್ನೆಲ್ಲ ಕ್ರಾಸ್ ಲಿಂಕ್‌ನ ಮೂಲಕ ನಾವು ಕೇಳಬಹುದು ಬೆಂಗಳೂರು ಟೆಲಿ ಫೋನ್‌ನಲ್ಲಿ. ಈ ಉಚಿತ ಸೌಲಭ್ಯಕ್ಕೆ ನಾವು ಕಂಪನಿಯವರಿಗೆ ಚಿರಋಣಿಗಳಾಗಿರ ಬೇಕೇ ಹೊರತು, ಟೆಲಿಫೋನ್ ಸರಿಯಾಗಿಲ್ಲ, ರಾಂಗ್ ನಂಬರ್ರೇ ಸಿಗುತ್ತೆ ಅಂತ ಹಲುಬ್ತಾ ಇರ್ಬಾರ್ದು. ನೀವೇ ಹೇಳಿ, ಈ ಮನೋರಂಜನೆ ನಿಮಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸಿಗುತ್ತದೆಯೇ ? ಕ್ಷಮ್ಸಿ, ಫೋನ್ ರಿಂಗ್ ಆಗ್ತಾ ಇದೆ ! ಯಾವ ವಾಣಿ ಕಾದಿದೆಯೋ ? ಬರ್‍ತೀನಿ !

ಅನರ್ಥ ಕೋಶ

—ನಾ. ಕಸ್ತೂರಿ

ಉಮೇದುವಾರ—ಒಂದು ವಾರದ ಮಟ್ಟಿಗೆ ಉಮೇದು ತೋರುವವ; ಯಾರೂ ಅದುವರೆಗೂ ಅರಿಯದ ತ್ಯಾಗಿ.

ಉಳಿತಾಯ—ನಮಗೆ ಸಾಲ ಕೊಡಬೇಕಾದವರು, ಮಾಡಬೇಕಾದ ಕರ್ತವ್ಯ.

ಊರು ಭಂಗ—ಪಾರ್ಟಿ ಜನಗಳು ಹೆಚ್ಚಿದ ಊರಿನ ಅವಸ್ಥೆ

ಋಣಹದ್ದು—ಸಾಲ ವಸೂಲು ಮಾಡುವುದಕ್ಕೆ ನಮ್ಮ ಬಾಗಿಲಿಗೆ ಬರುವವ

ಋಷೀಕೇಶ—ದಾಡಿ

ಎದೆ—ನ್ಯೂಮೋನಿಯಾದ ಉಗಮಸ್ಥಾನ; ಆದ್ದರಿಂದ ಎಂಟೆದೆ ಇರುವವನಿಗೆ ಇನ್ನೂ ಅಪಾಯ

ಎಸ್ಸಾರ್—ಕೆಳ ದರ್ಜೆಯ ನೌಕರ ಮೇಲಧಿಕಾರಿಗೆ ಹೇಳುತ್ತಿರಬೇಕಾದ ಜವಾಬು

ಏಕ ಚ್ಛತ್ರಾಧಿಪತಿ—ಒಂದೇ ಕೊಡೆ ಇರುವವ

ಕಡಲೆ—ಹಲ್ಲಿದ್ದಾಗ ಸಿಗದ ಪದಾರ್ಥ

ಕರ್ಣ ಕಠೋರ—ಹಾರ್ಮೋನಿಯಂ

ಕರ್ಣ ಭಾರ—ಲೋಲಕ್ಕು

ಕರ್ಣ ಮಂತ್ರ—ಚಾಡಿ

ಕಸದ ಬುಟ್ಟಿ—ಇದನ್ನು ತುಂಬುವುದಕ್ಕಾಗಿಯೇ, ಅನೇಕ ಬರಹಗಾರರು, ಹಗಲಿರುಳು ದುಡಿಯುತ್ತಿರುವುದು.

ಕಳೆ—ಬೆಳೆಗಿಂತ ಸೊಂಪಾಗಿ ಬೆಳವ ಗಿಡಗಳು.

ಕಾಲ ಪುರುಷ—ರೇಡಿಯೋ ನಿಲಯಂಗಳಲ್ಲಿ ಕಾಲಾವಕಾಶ ಮುಗಿಯಿತು ಎಂದು ಸೂಚಿಸುವ ನೌಕರ.

ಕಿಕ್ಕಿರಿದು—ಒದ್ದು... ....ಬೀಳಿಸಿ.........ಅನಂತರ.........ಇರಿದು

ಕಿವಿ—ಇದರ ಮೇಲೆ ಹಾಕಿದ್ದಲ್ಲ ತಲೆಯೊಳಕ್ಕೆ ಹೋಗುತ್ತದೆ–ಎಂಬುದು ತಪ್ಪು.

ಕಿಷ್ಕಿಂದೆ—ಮಕ್ಕಳೊಂದಿಗನ ಮನೆ.

ಧನ್ವಂತ್ರಿ ನಕ್ಕಾಗ

ಧನವಂತ

ವೈದ್ಯರ ಕೆಲಸ ತುಂಬಾ ಕಷ್ಟ ಯಾವಾಗಲೂ ಗಂಭೀರವಾಗಿ ಇರ್ತಾರೆ. ಪ್ರಾಣ ಹೋಗೋ ಸಮಸ್ಯೆಗಳೆಲ್ಲ ಇರುವಾಗ ಹಾಸ್ಯಕ್ಕೆ ಜಾಗವಿಲ್ಲ ಅಂತ ಅನ್ಕೊಂಡಿರ್ತಾರೆ ಕೆಲವರು. ಈ ನಂಬಿಕೆ ಹಾಸ್ಯಾಸ್ಪದ ಅಂತ ನುರಿತ ವೈದ್ಯರಿಗೆ ಗೊತ್ತು. ದವಾಖಾನೆಯಲ್ಲಿ. ಆಸ್ಪತ್ರೆಗಳಲ್ಲಿ ಹಾಸ್ಯದ ಕಿಡಿಗಳು ಸದಾ ಹಾರ್‍ತಾನೇ ಇರತ್ವೆ ಕೆಲವು ಸನ್ನಿವೇಶಗಳನ್ನು ಮಾತ್ರ ಹೇಳ್ತೀನಿ.

*　　*　　*　　*

ಚಿಕ್ಕ ಹುಡುಗನೊಬ್ಬ ಸೀಬೇ ಮರದಿಂದ ಬಿದ್ದು ಬಲಮೊಣಗೈ ಗಾಯ ಮಾಡಿಕೊಂಡು ಅವನ ತಾಯಿ ಗಾಬರಿಯಿಂದ ಬಂದಳು "ನೋಡಿ ಡಾಕ್ಟ್ರೆ, ಎಷ್ಟು ಹೇಳಿವರೂ ಕೇಳಲ್ಲ ಇವನು ಮನೆ ಹತ್ರ ಇರೋ ಮರಾ ಎಲ್ಲ ಹತ್ತಿ ಚೇಷ್ಟೆ ಮಾಡ್ತಾನೆ" ಅಂತ. ಹಲುಬಿದಳು. ಡಾಕ್ಟರು, ಸ್ವಲ್ಪ ಸುಧಾರಿಸಿಕೋ ತಾಯಿ, ಇವನ ಹೆಸರೇನು ಅಂದರು. ಉತ್ತರ ಬಂತು 'ಹನುಮಂತಪ್ಪ ! ಡಾಕ್ಟರಿಗೆ ನಗು ಯಾಕೆ ಬಂತು ಅಂತ ತಾಯಿಗೆ ಗೊತ್ತೇ ಆಗಲಿಲ್ಲ !

*　　*　　*　　*

ಹೊಸ ವೈದ್ಯ ತನ್ನ ಕ್ಲಿನಿಕ್ ಶುರು ಮಾಡಿದ. ಯಾರಾದರೂ ಹೊಸ ರೋಗಿ ಬಂದರೆ, ತಾನು ಬಹಳ ಬಿಸಿ ಅಂತ ತೋರಿಸ್ಕೊಂಡರೆ ವಾಸಿ ಅಂತ ಅನ್ಕೊಂಡ. ಒಬ್ಬ ಅಜಾನು ಬಾಹು ಬಂದ. ನೀವೇನಾ ಡಾಕ್ಟರ್ ರಾಜ್ ಅಂದ. ಡಾಕ್ಟರು ಫೋನ್‌ನಲ್ಲಿ ಮಾತಾಡ್ತಾ ಇರೋ ಹಾಗೆ ನಟಿಸಿದ "ಇಲ್ಲ ನಾನು ಸಾಯಂಕಾಲ ಬರಕ್ಕಾಗಲ್ಲ ತುಂಬಾ ಜನ ಕ್ಲಿನಿಕ್ಕಲ್ಲಿ ಕಾದಿರ್‍ತಾರೆ, ಇನ್ನೂ ನಾಕೂ ವಿಸಿಟ್ ಬೇರೆ ಇದೆ, ಇತ್ಯಾದಿ" ಫೋನ್ ಕೆಳಗಿಟ್ಟು ಡಾಕ್ಟರು ಹೇಳಿದ. "ಏನು ತಮಗೆ ತೊಂದರೆ ? " ಆಗಂತುಕ ನಿಧಾನವಾಗಿ ಹೇಳಿದ ತಮ್ಮ ಫೋನು ಕೆಟ್ಟಿದೆ ಅಂತ ಕಂಪ್ಲೇಂಟ್ ಕೊಟ್ಟಿದ್ರಲ್ಲ, ರಿಪೇರಿಗೆ ಬಂದಿದೀನಿ ! " ಡಾಕ್ಟರ್ ಮುಖ ಅವರ ಕೆಂಪು ಫೋನ್ ತರಹ ಆಯ್ತು !

*　　*　　*　　*

Waiting ರೂಮಲ್ಲಿ ಕೇಳಿದ್ದು

ಒಬ್ಬಾಕೆ: ಸೋಡ್ರಿ ನಮ್ಮ ಚಿಕ್ಕಪ್ಪಂಗೆ ಡಾಕ್ಟರು ಮೂರು ಮಾತ್ರೆ ಕೊಟ್ಟರು ಬೆಳಗ್ಗೆ ಮಧ್ಯಾನ್ಹ ರಾತ್ರಿ ತೆಗೋಳಿ ಅಂತ ! ಎರಡು ತೊಗೊಂಡ ಕೂಡಲೆ ಆತ ಪರೋಪರ ! "

ಇನ್ನೊಬ್ಬಾಕೆ "ಪಾಪ ! ಇನ್ನು ಮೂರೂ ತೊಗೊಂಡಿದ್ರೆ ಏನು ಅನಾಹುತ ಆಗ್ತಿತ್ತೋ ? "

*   *   *   *

ಇಂಜೆಕ್ಷನ್ ತೊಗೋಳುಕ್ಕೆ ಮಗು ಗಲಾಟೆ ಮಾಡಬಹುದು ಅಂತ ಡಾಕ್ಟರು ಹೇಳಿದರು, " ಮಗೂ, ಇಂಜೆಕ್ಷನ್ ತೊಗೊಂಡ್ರೆ, ನಿಮ್ಮಮ್ಮನಿಗೆ ಹೇಳಿ ಕೇಸರಿ ಭಾತ್ ಮಾಡ್ಸಿ ತಿನ್ನಿಸ್ತೀನಿ ! " ಚೂಟಿ ಮಗು ಹೇಳ್ತು ಡಾಕ್ಟ್ರೆ ಅಮ್ಮ ಮಾಡೋ ಕೇಸರಿಭಾತು ತಿನ್ನುಕ್ಕಾಗುಲ್ಲ ! Ice Cream ಕೊಡಿಸ್ಬಿಡಿ ಸಾಕು ! !

*   *   *   *

ಢಡೂತಿ ಮಹಿಳೆ ಜೊತೆ ಸಣಕಲ ಗಂಡ ಬಂದ ಡಾಕ್ಟರು 'ಏನು' ಅಂದರು "ನನ್ನ ಹೆಂಡ್ತಿಗೆ ಕಿವಿ ಕೇಳುಲ್ಲ ಡಾಕ್ಟ್ರೆ " ಅಂದ ಗಂಡ. ಡಾಕ್ಟರು ಪರೀಕ್ಷೆ ಮಾಡಿ, ಅಯ್ಯ ನಿನ್ನ ಹೆಂಡ್ತೀಗೆ ಏನೂ ಆಗಿಲ್ಲ, ವಯಸ್ಸಾದ ಮೇಲೆ ಕಿವಿ ಮಂದ ಆಗಿದೆ 'ಅಷ್ಟೆ ಹಾಗೇ ಅಂತ ಹೇಳ್ಬಿಡಿ ! "ಗಂಡ ಭಯ ಮಿಶ್ರಿತ ದನೀಲಿ ಹೇಳಿದ "ಡಾಕ್ಟ್ರೇ, ನೀವೇ ಹೇಳ್ಬಿಡಿ ! ! "

*   *   *   *

ಮನೋ ವೈದ್ಯನ ಬಳಿ ರೋಗೀನ ಕರೆತಂದರು. ರೋಗಿ ಹೆಂಡತಿ ಹೇಳಿದಳು, "ಡಾಕ್ಟ್ರೆ, ಇವರು ದಿನಾ ಅಮೆರಿಕಾ, ರಷ್ಯಾ, ಇಂಗ್ಲೆಂಡು ಅಂತ ಮನಸ್ನಲ್ಲೇ ಹಾರಾಡ್ತಾ ಪ್ರಯಾಣ ಮಾಡ್ತಿರ್ತಾರೆ ! ಏನಾದ್ರೂ ಚಿಕಿತ್ಸೆ ಮಾಡಿ ಗುಣ ಮಾಡಿ ! " ರೋಗಿ ಡಾಕ್ಟರ್ ಕಡೆ ಕಣ್ಣು ಮಿಟುಕಿಸಿ ಹೇಳಿದ, " ಡಾಕ್ಟ್ರೇ ಕನಿಷ್ಠ ಪಕ್ಷ ಇಂಡಿಯಾಲೇ Travel ಮಾಡೋ ತರಹಾ ಆದ್ರೂ ಮಾಡಿ ! ಖರ್ಚು ಕಮ್ಮಿ ಆಗುತ್ತೆ ! !

*   *   *   *

ಮನೋ ವೈದ್ಯರ ಆಫೀಸು. ಸೊಸೈಟಿ ಆಧುನಿಕ ಮಹಿಳೆಯೊಬ್ಬಳು ಗಂಡನ್ನ ಕರೆತಂದಳು. ಡಾಕ್ಟ್ರೆ, ನನ್ನ ಗಂಡಂಗೆ ವಿಚಿತ್ರ ಕಾಯಿಲೆ! ತೀರ ಹಳೇ ಜೋಕು ಗಳನ್ನ ಪಾರ್ಟಿಗಳಲ್ಲಿ ಹೇಳ್ತಾರೆ! ಆದರೆ ಅದು ಹೊಸದು ಅಂತ ಅವರಿಗೆ ಭಾವನೆ! ಇದಕ್ಕೆ ಏನಾದರೂ ಮದ್ದಿದೆಯೇ?" ವೈದ್ಯರು ನಕ್ಕು ಹೇಳಿದರು. ವಿಷಯ ಚೆನ್ನಾಗಿದೇ ತಾಯಿ. ಸ್ವಲ್ಪ ಗಹನವಾಗಿ ಯೋಚಿಸಿ ನೋಡಬೇಕು ಅಂದರು. ಗಂಡನ್ನ ಪ್ರತ್ಯೇಕವಾಗಿ ವಿಚಾರಿಸಿದರು. ಅವನು ಹೇಳಿದ, "ಅವೆಲ್ಲ ಹಳೇ ಜೋಕು ಗಳು ಅಂತ ಗೊತ್ತು, ಡಾಕ್ಟರೆ! ಅದರೆ ಇವಳು ಹೋಗೋ ಪಾರ್ಟಿ ಎಲ್ಲ ಬಲೇ ಬೋರು! ಅದನ್ನ ತಪ್ಪಿಸಿಕೊಳ್ಳೋಕ್ಕೆ ಹೀಗೆ ಮಾಡ್ತಿದೀನಿ. ನೀವು ಸಹಾಯ ಮಾಡಬೇಕು. ಡಾಕ್ಟರು ಮಹಿಳೆಗೆ ಹೇಳಿದರು. "ಅಮ್ಮ, ಇದು ಗುಣ ಆಗ ಬೇಕಾದರೆ ಇವನು ಎರಡು ವರ್ಷ ಯಾವ ಪಾರ್ಟಿನೂ ಅಟೆಂಡ್ ಮಾಡಬಾರದು!

* * * *



"ನಲ್ಲೀ ಒಂದ್ಬಿಟ್ಟು, ಇನ್ನೆಲ್ಲಾ ಕಡೇನೂ ನೀರು ಸೋರ್ತಾನೇ ಇರತ್ತೆ"

ಜನಪ್ರಿಯ ವಿಜ್ಞಾನ ಕಾಲ

—ಶಿವು

ಇದೇ ಶೀರ್ಷಿಕೆಯ ಹಿಂದಿನ ಬರಹದಲ್ಲಿ ಬಾಹ್ಯಾಕಾಶವನ್ನು ಓದುಗರಿಗೆ ಪರಿಚಯಿಸಿದ್ದೆವು. ಪ್ರತಿಕ್ರಿಯೆ ಉತ್ತೇಜಕರವಾಗಿದ್ದುದರಿಂದ ಈಗ ಕಾಲದ ಬಗ್ಗೆ ಮಾಹಿತಿ ನೀಡುತ್ತಿದ್ದೇವೆ.

ಕಾಲವೆಂದರೇನು ?

ಎರಡು ಘಟನೆಗಳ ನಡುವಣ ಅಂತರವೇ ಕಾಲ. ಕಾಲವನ್ನು ಗೆಲ್ಲಬೇಕಾದರೆ ಘಟನೆಗಳು ನಡೆಯದಂತೆ ನೋಡಿಕೊಂಡರೆ ನಾಕು. ಇದೇ ಕಾರಣದಿಂದ ಸರ್ಕಾರೀ ಕಛೇರಿಗಳಲ್ಲಿನ ಸಿಬ್ಬಂದಿಗಳು ನಿರ್ಲಿಪ್ತತೆಯಿಂದ ಕಾಲಾತೀತರಾಗಿರುತ್ತಾರೆ.

ಕಾಲದ ಸಾಪೇಕ್ಷತ್ವ.

ಐನ್‌ಸ್ಟೈನ್ ಮಹಾಶಯನು ಕಾಲ ದೇಶಗಳ ಸಾಪೇಕ್ಷತೆಯನ್ನು ಪ್ರತಿಪಾದಿಸಿದ. ಇದರ ಪ್ರಕಾರ ವೇಗ ಹೆಚ್ಚಿದಷ್ಟೂ ಕಾಲ ನಿಧಾನವಾಗಿ ಸಾಗುತ್ತದೆ. ಇದು ಹೇಗೆ ಎಂದು ಆಶ್ಚರ್ಯಪಡಬೇಡಿ. ಒಂದೇ ಕಾಲಪ್ರಮಾಣ ಘಟನೆಗನುಗುಣವಾಗಿ ವ್ಯತ್ಯಾಸವಾದಂತೆ ತೋರುವುದು ನಮ್ಮೆಲ್ಲರ ಅನುಭವಕ್ಕೆ ಬಂದಿದ್ದೇ. ನೀವು ಇನ್‌ಕಮ್ ಟ್ಯಾಕ್ಸ್ ಆಫೀಸರ್ ಮುಂದೆ ಕುಳಿತಿದ್ದಾಗ ಅವರ ಪ್ರಶ್ನೆಗಳಿಂದ ಬೆವತು ಹೃದಯ ಬಡಿತದ ವೇಗ ಹೆಚ್ಚಿದಷ್ಟು ಕಾಲ ಆಮೆಯಂತೆ ಸಾಗಿದಂತೆ ಭಾಸವಾಗುವುದಿಲ್ಲವೇ. ಅದೇ ಶಬಾನ ಅಜ್ಮಿ, ಕುಲಭೂಷಣ್‌ಕರಬಂಡಾ ಇವರ ಚಿತ್ರನೋಡುತ್ತಾ ಕುಳಿತಿದ್ದಾಗ ಘಂಟೆಗಳು ಕ್ಷಣಗಳಂತೆ ಕಳೆದು ಹೋಗುವುದು ಅತಿ ಸ್ವಾಭವಿಕ. ಇದೇ ಕಾಲದ ಸಾಪೇಕ್ಷತ್ವ.

ಕಾಲದ ಚರಿತ್ರೆ

ಈಗ ನಾವು ಇರುವುದು ಕಲಿಯುಗ. ಈ ಹಿಂದೆ ತ್ರೇತಾ, ಕೃತ ದ್ವಾಪರಗಳು ಆಗಿಹೋದವು. ನಾವೀಗ ನಿರೀಕ್ಷಿಸ ಬೇಕಾದದ್ದು ಪ್ರಳಯ ಒಂದೇ.

ಕಾಲಯಾನ ;

ಕಾಲದ ಪ್ರವಾಹ, ಭೂತದಿಂದ, ಭವಿಷತ್ತಿಗೆ ಒಂದೇ ದಿಕ್ಕನಲ್ಲಿ ಸಾಗುತ್ತಿದೆ ಎಂಬುದು ಸ್ವಾಭಾವಿಕ ನಂಬಿಕೆಯಾದರೂ, ಕಾಲದಲ್ಲಿ ಯಾನಮಾಡುವ, ಅಂದರೆ

ವರ್ತಮಾನದಿಂದ, ಭೂತ ಕಾಲಕ್ಕೆ ಅಥವಾ ಭವಿಷ್ಯತ್ತಿಗೆ ಪ್ರಯಾಣ ಮಾಡುವ ಬಯಕೆ ಮಾನವನ ಬಹು ಹಿಂದಿನ ಆಶೆ. ಎಚ್. ಜಿ. ವೆಲ್ ತನ್ನ ಟೈಮ್ ಮೆಷೀನ್‌ಯಂತ್ರದ ಕಲ್ಪನೆಯಿಂದ ಈ ಆಶೆಗೆ ಒಂದು ಕಾದಂಬರಿ ರೂಪ ಕೊಟ್ಟಿದ್ದ. ಈಗ ಮೊದಲಬಾರಿಗೆ ಭಾರತೀಯರಾದ ನಾವು ಕಾಲಯಾನ ಬಹುಸುಲಭವೆಂದು ಸಮಸ್ತ ಜಗತ್ತಿಗೇ ತೋರಿಸಿದ್ದೇವೆ. ನಮ್ಮ ಪ್ರಿಯ ಪ್ರಧಾನಿಯವರು, ನಾವು ಇಪ್ಪತ್ತೊಂದನೆಯ ಶತಮಾನದ ಅಂಚಿನಲ್ಲಿದೀವೆಂದು ನವ ದೆಹಲಿಯಲ್ಲಿ ಹೇಳಿದ್ದಾರೆ. ಕರ್ನಾಟಕದ ಹೆಗಡೆಯವರು ನಾವಿನ್ನೂ ಹತ್ತೊಂಭತ್ತನೆಯ ಶತಮಾನದಲ್ಲಿರುವುದಾಗಿ ಬೆಂಗಳೂರಿನಲ್ಲಿ ಹೇಳಿದ್ದಾರೆ. ಕಾಲಯಾನ ಮಾಡುವ ಅಭಿಲಾಷೆಯುಳ್ಳ ವಿದೇಶೀ ಪ್ರವಾಸಿಗರು, ಬೊಂಬಾಯಿಗೆ ಬಂದಿಳಿದ ನಂತರ ಭವಿಷ್ಯತ್ತಿಗೆ ಯಾನಮಾಡುವವರನ್ನು ದೆಹಲಿಗೂ, ಭೂತ ಕಾಲಕ್ಕೆ ಪ್ರಯಾಣ ಮಾಡಲಿಚ್ಛಿಸುವವರನ್ನು ಬೆಂಗಳೂರಿಗೂ ರವಾನಿಸಲು ಸಿದ್ಧತೆಗಳ ನಡೆದಿವೆ.

ಕಾಲದ ಉಪಯೋಗಗಳು

ಎಚ್. ಎಂ. ಟಿ. ಫ್ಯೂರ್‌ವಾಲ್, ಕೈಗಡಿಯಾರ ತಯಾರಿಕರಿಗೇ ಅಲ್ಲದೇ, ಯಾರಿಗೂ ತಿಳಿಸದೇ ಮರೆಯಾಗಲಿಚ್ಛಿಸುವ ನೀಹಾರಿಕೆಗಳಿಗೂ ಕಾಲದಿಂದ ಬಹಳ ಉಪಯೋಗ. ಅನೇಕ ಲಕ್ಷ ವರುಷಗಳ ಹಿಂದಿನ ನೀಹಾರಿಕೆಗಳ ಬಿಂಬ ಈಗ ನಮಗೆ ತಲುಪುವುದರಿಂದ, ಈಗ ಅಲ್ಲೇನಾದರೂ, ನಮಗೆ ತಿಳಿಯುವ ಸಾಧ್ಯತೆಯೇ ಇಲ್ಲ.

ಮುಕ್ತಾಯ

ಕಾಲದ ಅರಿವು ನಮಗಾಗಬೇಕಾದರೆ, ಮೊದಲಿಗೆ ನಾವು ಇರಬೇಕು, ನಾವೇ ಇಲ್ಲದಿದ್ದರೆ. ಕಾಲವು ನಮ್ಮ ಪಾಲಿಗೆ ಸ್ತಭ್ಧವಾದಂತೆಯೇ. ರೇಗನ್ ಹಾಗೂ ಗೋರ್‌ಬಚಾಫ್, ಮನಸ್ಸು ಮಾಡಿದರೆ, ಎಲ್ಲರ ಪಾಲಿಗೂ ಕಾಲವನ್ನು ಸ್ತಭ್ಧಗೊಳಿಸಿ, ನಮ್ಮ ಸಕಲ ತಾಪತ್ರಯಗಳೂ ಮುಕ್ತಿ ಹೊಂದುವ ಆಶಾಕಿರಣ ದಿಗಂತದಲ್ಲಿ ಗೋಚರಿಸುತ್ತಿದೆ.

ಇಂಗ್ಲೀಷ್ ವಾರ್ತೆ

—ಆರತಿ

ಟೀವೀ ತರುಣಿಯ ಸುಲಲಿತ ವಾಗ್ಝರಿ
ತಡೆಯೋ ಇಲ್ಲದೆ ಹರಿದಿತ್ತು.
ಇಂಗ್ಲೀಷ್ ಭಾಷಾ ಮಾಧುರ್ಯವದು
ರಾಣಿಯ ನುಡಿಯನೆ ಮೀರಿತ್ತು

ಬಂದಿತು ನೋಡಿ ಮದ್ರಾಸ್ ಸುದ್ದಿ
ಎ ಐ ಡಿ ಎಂ ಕೆ ಒಳ ಕಲಹ
ಹೇಳಿಕೆ ಇತ್ತಾ ಧೀರ ಪುಢಾರಿ
ಮತ್ತಿನ್ನಾರು ನೆಡುಂಚ್ಚೆಳಿಯನ್ !

ತತ್ತರಿಸಿತು ತರುಣಿಯ ಭಾಷೆ
ನಡುಗಿತು ಚೆಲುವೆಯ ಜೇನುದನಿ
ಉಚ್ಚರಿಸಿದಳಾ ಗುಲಾಬಿ ಕನ್ನೆ
"ಹೀಗೆಂದರು ನಾಡುಂಜಿಯನ್" !

Name of Publication : APARANJI

Publisher : M. SHIVA KUMAR

Printer : V. R. NATH


Owner : M. SHIVA KUMAR

Published in : Impressions Sampige Road
Malleswaram, Bangalore-560 003

Place of Publication : Bangalore

November 1985
Bangalore

ಶುಭಾಶಯಗಳೊಂದಿಗೆ ;



—ಹಿತೈಷಿ

No. 23 AL 84-NT III

—: ಶುಭಾಶಯಗಳೊಂದಿಗೆ :—

ದಿ ಸಂಡೂರ್ ಮ್ಯಾಂಗನೀಸ್ ಅಂಡ್ ಐರ್ನ್ ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಛೇರಿ ;

"ಲೋಹಾದ್ರಿ ಭವನ"

ಯಶವಂತ ನಗರ್–583 124 ಸಂದೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ